
ನವೆಂಬರ್-2013
ಬೆಲೆ ರೂ. 1
ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ
ಹೊಂಗಿರಣದ ಹೊಸ ಆಕಾಂಕ್ಷೆಗಳು
ಗರಿಗೆದರಿದಾಗ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 24 ಸಂಚಿಕೆ 2

ನವೆಂಬರ್ 2013, ಬೆಲೆ ರೂ. 1



**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.:
9810391608
ಆಶಾಲತಾ ಎಂ.:
9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್
9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತಾ:
9971121636
ಟಿ.ಎಂ. ಮೈಲಾರಪ್ಪ:
9868347461

**ಸಮಿತಿ ಸದಸ್ಯರು**
ಆಂಜನಿ ಗೌಡ:
9811165354
ರಾಧಾಕೃಷ್ಣ:
9818252183
ಪೂರ್ಣಿಮಾ ಗೌಡ:
8860916899
ವಿ.ವಿ.ಬಿರಾದಾರ:
9873005409
ಪಿ.ಸಿ.ಶ್ರೀನಿವಾಸ್:
9868170790
ಆನಂದ ಮುರಗೋಡ:
9312931233
ಆಶಾ ಶ್ಯಾಮಸುಂದರ್:
9871256177
ಬಸವರಾಜ ಮೇಟಿ:
9810282951
ಟಿ.ಪಿ. ಬೆಳ್ಳಿಯಪ್ಪ:
9654555795
ಕುಸುಮಾ ಪಿ. ನಂದರಗಿ
9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ


## ನೇರ ಮಾತು

ಕನ್ನಡ ರಂಗಭೂಮಿಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತಿರುವ ಮೈಸೂರಿನ ರಂಗಾಯಣ, ಕರ್ನಾಟಕ ರಾಜ್ಯ ಸರಕಾರದ ಅಡಿಯಲ್ಲಿರುವ ಒಂದು ಸ್ವಾಯತ್ತ ಸಂಸ್ಥೆ. ರಂಗಾಯಣದ ನಿರ್ದೇಶಕ ಸ್ಥಾನಕ್ಕೆ ರಂಗಕರ್ಮಿ ಜನಾರ್ಧನ (ಜನ್ನಿ) ಅವರನ್ನು ಸರಕಾರವು ನೇಮಿಸಿದೆ. ರಂಗಾಯಣ ಈ ವರ್ಷ ಇಪ್ಪತ್ತೈದು ವರ್ಷಗಳನ್ನು ಪೂರೈಸಲಿದೆ.

ಭಾರತ ರಂಗಭೂಮಿಗೆ ವಿಶಿಷ್ಟ ಕೊಡುಗೆ ನೀಡಿದ ಬಾಬುಕೋಡಿ ವೆಂಕಟರಮಣ ಕಾರಂತರು 1986 ರಲ್ಲಿ ಭೋಪಾಲದ ಭಾರತ ಭವನದಲ್ಲಿ ವಿಭಾ ಮಿಶ್ರಾ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರು. ಆ ಸಮಯದಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದವರು ಮಾಜಿ ಅಧ್ಯಕ್ಷ ಕೆ.ಆರ್. ನಾಗರಾಜ್. ದೆಹಲಿಯಲ್ಲಿ ಕನ್ನಡದ ಕೈಂಕರ್ಯವನ್ನು ಅತ್ಯಂತ ನಿಷ್ಠೆಯಿಂದ ಮಾಡುತ್ತಿದ್ದ ಸುಪ್ರೀಂ ಕೋರ್ಟಿನ ಹಿರಿಯ ವಕೀಲರಾಗಿದ್ದ ನಾಗರಾಜ್ ಅವರು ಬಿ.ವಿ. ಕಾರಂತರನ್ನು ವಿವಾದಗಳಿಂದ ರಕ್ಷಿಸಲು ಬಹಳಷ್ಟು ಪ್ರಯತ್ನ ಪಟ್ಟರು. ಅವರು ಸ್ವಂತ ಖರ್ಚಿನಲ್ಲಿ ಭೋಪಾಲಕ್ಕೆ ಹೋಗಿ ಕೋರ್ಟಿನ ಕೇಸಿಗೆ ಬೇಕಾದ ವ್ಯವಸ್ಥೆ ಮಾಡುತ್ತಿದ್ದರು.

ಕಾರಂತರ ಕೇಸನ್ನು ಕೋರ್ಟ್‌ನಲ್ಲಿ ಗೆಲ್ಲಬೇಕೆಂದು ಎಲ್ಲಾ ಪ್ರಯತ್ನವನ್ನು ಕೆ.ಆರ್. ನಾಗರಾಜ್ ಅವರು ಮಾಡಿದರಾದರೂ ಆರಂಭದಲ್ಲಿ ಅದು ಯಶಸ್ವಿಯಾಗದೆ ಕಾರಂತರು ಜೈಲುವಾಸ ಮಾಡಬೇಕಾಗಿ ಬಂತು. ಕಾರಂತರ ಕೇಸನ್ನು ಗೆಲ್ಲಲಾಗದ ನೋವು ನಾಗರಾಜ್ ಅವರಲ್ಲಿತ್ತು. ಹೀಗಾಗಿ ಜೈಲಿನಿಂದ ಹೊರಬಂದ ಕಾರಂತರಿಗೆ ಏನಾದರೊಂದು ಮಾಡಬೇಕೆಂಬ ಹಂಬಲ ಅವರಲ್ಲಿತ್ತು. ಕಾರಂತರ ಕೋರ್ಟಿನ ಖರ್ಚಿಗಾಗಿ ದೆಹಲಿ ಕರ್ನಾಟಕ ಸಂಘದಿಂದ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ನೀಡುವ ಪ್ರಸ್ತಾವವನ್ನು ಕಾರ್ಯಕಾರಿ ಸಮಿತಿಯ ಮುಂದಿಟ್ಟರು. ಸಮಿತಿಯ ಕೆಲವರು ಇದೊಂದು ಮಹಿಳೆಯ ಮೇಲಿನ ದೌರ್ಜನ್ಯದ ಘಟನೆ, ಹೀಗಾಗಿ ಹಣ ಕೊಡಬಾರದೆಂದು ವಿರೋಧ ವ್ಯಕ್ತಪಡಿಸಿದರು. ಅಂತಹ ಕೆಲವರನ್ನು ಒಪ್ಪಿಸುವ ಜವಾಬ್ದಾರಿಯನ್ನು ಕೆ.ಆರ್. ನಾಗರಾಜರು ಆಗ ಸಮಿತಿಯಲ್ಲಿ ಜಂಟಿ ಕಾರ್ಯದರ್ಶಿಯಾಗಿದ್ದ ನನಗೆ ವಹಿಸಿದ್ದರು. ಸಂಘದ ಧನ ಸಹಾಯ ಕಾರಂತರಿಗೆ ದೊರಕಿತು.

ದೆಹಲಿ ಕರ್ನಾಟಕ ಸಂಘದ ಜೊತೆ ಅತ್ಯಂತ ನಿಕಟ ಸಂಬಂಧ ಇಟ್ಟುಕೊಂಡಿದ್ದ ಕರ್ನಾಟಕ ಸರಕಾರದ ಆಗಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾಗಿದ್ದ ಜೀವರಾಜ್ ಆಳ್ವರು ನಮಗೆ ಬಹಳಷ್ಟು ಆಪ್ತರಾಗಿದ್ದರು. ನಾಗರಾಜ್ ಅವರು ಒಂದು ದಿನ ಸಂಘಕ್ಕೆ ಆಗಮಿಸಿದ್ದ ಜೀವರಾಜ್ ಆಳ್ವರ ಜೊತೆ ಬಿ.ವಿ. ಕಾರಂತರಿಗಾಗಿ ಕರ್ನಾಟಕದಲ್ಲಿ ಏನಾದರೂ ಮಾಡಬೇಕೆಂಬ ಪ್ರಸ್ತಾಪವನ್ನು ಮುಂದಿಟ್ಟರು.

ಬಿ.ವಿ. ಕಾರಂತರು ಅಮೂಲ್ಯ ಕೊಡುಗೆ ನೀಡಿದ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ಮಾದರಿಯಲ್ಲಿ ಒಂದು ರಂಗ ಶಾಲೆಯನ್ನು ಆರಂಭಿಸಬೇಕು ಎಂಬ ಆಶಯವನ್ನು ಮುಂದಿಟ್ಟು ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಗೆ ಪ್ರಸ್ತಾಪವನ್ನು ಸಲ್ಲಿಸಿದರು. ರಾಮಕೃಷ್ಣ ಹೆಗಡೆಯವರು ಮುತುವರ್ಜಿ ವಹಿಸಿ ಮೈಸೂರಿನಲ್ಲಿ ರಂಗಾಯಣದ ಆರಂಭಕ್ಕೆ ಕಾರಣರಾದರು.

ನಾಡಿನ ರಂಗಭೂಮಿಯ ಮತ್ತು ಸಾಂಸ್ಕೃತಿಕ ಕ್ಷೇತ್ರದ ಬಹಳಷ್ಟು ಮಂದಿಯ ಕೊಡುಗೆಯಿಂದ ಹುಟ್ಟಿ ಬೆಳೆದ ಮೈಸೂರಿನ ರಂಗಾಯಣಕ್ಕೆ ಕೆ.ಆರ್. ನಾಗರಾಜ್ ಅವರು ಕನ್ನಡ ಭಾಷೆ ಮತ್ತು ಸಂಸ್ಕೃತಿ ಮೇಲಿನ ಅಭಿಮಾನದಿಂದ ಮಾಡಿದ ಕೆಲಸ ಹಾಗೂ ಅಂದಿನ ರಾಜಕೀಯ ಧುರೀಣರ ಕಾರ್ಯಶೈಲಿಯೂ ಕರ್ನಾಟಕಕ್ಕೊಂದು ಹೆಮ್ಮೆಯ ರಂಗಸಂಸ್ಥೆಯನ್ನು ನೀಡುವಲ್ಲಿ ಸಹಾಯಮಾಡಿದೆ. ಮೈಸೂರಿನ ರಂಗಾಯಣದ ಇಪ್ಪತ್ತೈದು ವರ್ಷಗಳ ಸಾಧನೆಯಲ್ಲಿ ದೆಹಲಿ ಕರ್ನಾಟಕ ಸಂಘವು ಕೂಡ ಸಂಭ್ರಮಿಸುತ್ತದೆ. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಮುನ್ನೋಟ

ಈ ಬಾರಿಯ ರಾಜ್ಯೋತ್ಸವದ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸ್ಥಳೀಯ ಕಲಾವಿದರಿಗೆ ತರಬೇತಿ ನೀಡಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ದೆಹಲಿ ನಿವಾಸಿಗಳಾಗಿರುವ ಶ್ರೀ ಎಸ್.ಕೆ. ಕುಲಕರ್ಣಿ ಹಾಗೂ ಶ್ರೀಮತಿ ಮಾಲಾ ಹೊನ್ನತ್ತಿ ಅವರಿಗೆ ಸಂಘದ ಈ ಸಾಲಿನ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

2010ನೇ ಸಾಲಿಗೆ ಯಕ್ಷಗಾನ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಶ್ರೀ ಬನ್ನಂಜೆ ಸಂಜೀವ ಸುವರ್ಣ ಅವರಿಗೆ ಹಾಗೂ 2012ನೇ ಸಾಲಿಗೆ ಪರಿಸರ ಕ್ಷೇತ್ರದಲ್ಲಿ ಸಾಧನೆಗೈದ ಶ್ರೀಮತಿ ಸಾಲುಮರದ ತಿಮ್ಮಕ್ಕನವರಿಗೆ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ನವೆಂಬರ್ 10ರಿಂದ 17ರವರೆಗೆ ಪ್ರತಿದಿನ ಸಂಜೆ ಕಂಸಾಳೆ, ಡೊಳ್ಳುಕುಣಿತ, ನಗಾರಿ ಪ್ರದರ್ಶನಗಳು ನಡೆಯಲಿವೆ. ಕನ್ನಡದ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ. ಕಾರಂತರ ನೆನಪಿನಲ್ಲಿ ಬಡಗುತಿಟ್ಟು ಹಾಗೂ ತೆಂಕುತಿಟ್ಟು ಯಕ್ಷಗಾನ ಪ್ರದರ್ಶನಗಳು ನಡೆಯಲಿವೆ.

ಕನ್ನಡೇತರರಿಗೆ ಕರ್ನಾಟಕದ ಸಂಸ್ಕೃತಿಯನ್ನು ಪರಿಚಯಿಸುವ ಪ್ರಯತ್ನವಾಗಿ ಶಿವಕುಮಾರ್ ಕಲಾಸಂಘ, ಸಾಣೇಹಳ್ಳಿ ತಂಡದಿಂದ ಮರಣ್ ಹೀ ಮಹಾನವಮಿ ಹಾಗೂ ಮೈಬಾವರಿ ಚೆನ್ನಾ ಕಿ ಎಂಬ ಹಿಂದಿ ನಾಟಕಗಳು ನವೆಂಬರ್ 20 ಮತ್ತು 21ರಂದು ನಡೆಯಲಿವೆ. ದೆಹಲಿಯಲ್ಲಿ ನಡೆಯುವ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ತಾವೆಲ್ಲರೂ ಪಾಲ್ಗೊಳ್ಳಬೇಕೆಂಬುದು ನಮ್ಮ ಅಭಿಲಾಷೆ.

ಸಂಘವು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಆಟೋಟ ಸ್ಪರ್ಧೆಗಳನ್ನೂ ಆದ್ಯತೆಯಲ್ಲಿ ನಡೆಸುತ್ತಿದೆ. ಸಂಘದ ಮಾಜಿ ಅಧ್ಯಕ್ಷ ದಿ. ಕೆ.ಆರ್. ನಾಗರಾಜ ಅವರ ಪುತ್ರ ದಿ. ಅಂಬಿಕೇಶ್ ನೆನಪಿನ ಪ್ರಯುಕ್ತ ಪ್ರತಿ ವರ್ಷ ನಡೆಯುವ ಕ್ರಿಕೆಟ್ ಪಂದ್ಯಾವಳಿಯನ್ನು ಸರಿಯಾದ ಸಮಯುಕ್ಕೆ ಯಶಸ್ವಿಯಾಗಿ ನಡೆಸಲಾಗಿದೆ. ದೆಹಲಿಯ ವಿವಿಧ ಸಂಘ ಸಂಸ್ಥೆಗಳಿಂದ ಒಟ್ಟು 16 ತಂಡಗಳು ಭಾಗವಹಿಸಿದ್ದವು. ಸಂಚಾಲಕರಾದ ಶ್ರೀ ಟಿ.ಪಿ. ಬೆಳ್ಳಿಯಪ್ಪ ಮತ್ತು ಸದಸ್ಯರುಗಳಾದ ಶ್ರೀ ಅಶೋಕ್ ಕುಮಾರ್ ಮತ್ತು ಶ್ರೀ ಶಿವರಾಮ ರೈ ಅವರು ಈ ಯಶಸ್ಸಿನ ರೂವಾರಿಗಳು.

ಭಾರತದ ಕ್ರಿಕೆಟ್ ಆಟಗಾರ ಮೊಹಮ್ಮದ್ ಕೈಫ್ ಅವರು ಫೈನಲ್ ಪಂದ್ಯದ ದಿನ ಮೈದಾನದಲ್ಲಿ ಬಂದು ಪಂದ್ಯ ಪುರುಷೋತ್ತಮ ಪ್ರಶಸ್ತಿ ನೀಡಿರುವುದು ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಗೆ ಹೊಸ ಮೆರುಗನ್ನು ನೀಡಿದೆ. ಅ

*ಸಿ.ಎಂ.ನಾಗರಾಜ*

*ಪ್ರಧಾನ ಕಾರ್ಯದರ್ಶಿ*


**DELHI KARNATAKA SANGHA**

Rao Tularam Marg, Sector-12, R K Puram, New Delhi-110022.

Phone: 011-26109615. 011-65643615 email:dksangha@gmail.com website : www.delhikarnatakasangha.com

# ಕರ್ನಾಟಕ ರಾಜ್ಯೋತ್ಸವ–2013

## ನವೆಂಬರ್ 1 ಶುಕ್ರವಾರ

**ಬೆಳಿಗ್ಗೆ 8.00ಗಂಟೆಗೆ**
ಧ್ವಜಾರೋಹಣ ಹಾಗೂ ಕನ್ನಡದ ಹಾಡುಗಳು

## ನವೆಂಬರ್ 10 ಭಾನುವಾರ

**ಸಮಯ ಸಂಜೆ : 3.00ಗಂಟೆಗೆ**
ಚಾಲೇಂಜಿಂಗ್ ಸ್ಟಾರ್ ದರ್ಶನ್ ತೂಗುದೀಪ, ಜಯಪ್ರದಾ ಮತ್ತು ನಿಖಿತಾ ತುಕ್ರಾಲ್ ಅಭಿನಯದ ಕನ್ನಡ ಚಲನಚಿತ್ರ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ

**ಸಮಯ ಸಂಜೆ : 5.30ಕ್ಕೆ**
**ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ**
ಶ್ರೀ ಎಸ್.ಕೆ. ಕುಲಕರ್ಣಿ,
ಸುಪ್ರೀಂಕೋರ್ಟಿನ ಹಿರಿಯ ನ್ಯಾಯವಾದಿಗಳು
ಮಾಲಾ ಹೊನ್ನತ್ತಿ, ಮ್ಯಾರಥಾನ್ ಓಟಗಾರ್ತಿ
ಪ್ರಶಸ್ತಿ ಪ್ರದಾನ
ಶ್ರೀ ಎಂ.ಬಿ. ಪಾಟೀಲ್
ಸನ್ಮಾನ್ಯ ನೀರಾವರಿ ಸಚಿವರು, ಕರ್ನಾಟಕ ಸರ್ಕಾರ
ಅಧ್ಯಕ್ಷತೆ
ಶ್ರೀಮತಿ ಬಿ. ಜಯಶ್ರೀ
ಮಾನ್ಯ ರಾಜ್ಯ ಸಭಾ ಸದಸ್ಯರು
ಮುಖ್ಯ ಅತಿಥಿಗಳು
ಶ್ರೀ ಆನಂದ್ ಅಪ್ಪುಗೋಳ್
ನಿರ್ಮಾಪಕರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ
ಶ್ರೀಮತಿ ಜಯಪ್ರದಾ
ಮಾನ್ಯ ಲೋಕಸಭಾ ಸದಸ್ಯರು, ಖ್ಯಾತ ಚಲನಚಿತ್ರ ತಾರೆ

**ಸಮಯ ಸಂಜೆ : 6.30ಕ್ಕೆ**
ಡೊಳ್ಳು ಕುಣಿತ– ಶ್ರೀಮತಿ ಸುಗಂಧ ಮತ್ತು ತಂಡ, ಸಾಗರ, ಕಂಸಾಳೆ–ಕರ್ನಾಟಕ ಜಾನಪದ ಕಂಸಾಳೆ ಕಲಾವಿದರ ಸಂಘ, ಬೆಂಗಳೂರು, ನಗಾರಿ–ಆದಿ ದ್ರಾವಿಡ ತಮಟೆ ಮತ್ತು ನಗಾರಿ ಸಾಂಸ್ಕೃತಿಕ ಕಲಾ ತಂಡ, ಮೈಸೂರು.



## ನವೆಂಬರ್ 15 ಶುಕ್ರವಾರ

**ಸಮಯ : ಸಂಜೆ 5.30ಗಂಟೆಗೆ**
ಮೈಸೂರು ರಂಗಾಯಣ ಅರ್ಪಿಸುವ ನಗೆ ನಾಟಕ : ಬೀಚಿ ಬುಲ್ಲೆಟ್ಸ್ ಮತ್ತು ಮೈಮ್ ಸ್ಕಿಟ್, ತತ್ವಪದ ಹಾಗೂ ರಂಗಗೀತೆಗಳು
ಪ್ರಾಯೋಜನೆ : ವಾರ್ತಾ ಇಲಾಖೆ, ಕರ್ನಾಟಕ ಸರ್ಕಾರ

**ಸಮಯ ಸಂಜೆ : 7.00 ಗಂಟೆಗೆ**
ಶಿವರಾಮ ಕಾರಂತ ಪ್ರಶಸ್ತಿ –2010
'ಯಕ್ಷಗಾನ' ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ ಶ್ರೀ ಬನ್ನಂಜೆ ಸಂಜೀವ ಸುವರ್ಣ
ಶಿವರಾಮ ಕಾರಂತ ಪ್ರಶಸ್ತಿ –2012
'ಪರಿಸರ' ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡಿದ ಶ್ರೀಮತಿ ಸಾಲು ಮರದ ತಿಮ್ಮಕ್ಕ ಅವರಿಗೆ
ಪ್ರಶಸ್ತಿ ಪ್ರದಾನ
ಶ್ರೀ ಆಸ್ಕರ್ ಫರ್ನಾಂಡಿಸ್
ಮಾನ್ಯ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರು, ಭಾರತ ಸರ್ಕಾರ
ಮುಖ್ಯ ಅತಿಥಿಗಳು
ಶ್ರೀ ಎಚ್. ವಿಶ್ವನಾಥ್
ಸಂಸತ್ ಸದಸ್ಯರು, ಭಾರತ ಸರ್ಕಾರ
ಶ್ರೀ ಎಚ್. ಜನಾರ್ಧನ್ (ಜನ್ನಿ)
ನಿರ್ದೇಶಕರು, ರಂಗಾಯಣ, ಮೈಸೂರು

## ನವೆಂಬರ್ 17 ಭಾನುವಾರ

**ಸಮಯ ಸಂಜೆ 4.00 ಗಂಟೆಗೆ**
ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ ಅಂಗವಾಗಿ ಕಾರಂತ ನೆನಪು
ಅಧ್ಯಕ್ಷತೆ: ಪ್ರೊ. ಎಂ.ಎಲ್. ಸಾಮಗ
ಮಾಜಿ ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿ
ನೆನಪು : ಯಕ್ಷಗಾನ ಗುರು ಶ್ರೀ ಬನ್ನಂಜೆ ಸಂಜೀವ ಸುವರ್ಣ
ಮುಖ್ಯ ಅತಿಥಿ : ಪ್ರೊ. ಎಚ್. ಕೃಷ್ಣ ಭಟ್
ನಿರ್ದೇಶಕರು, ಯಕ್ಷಗಾನ ಕೇಂದ್ರ, ಉಡುಪಿ

**ಸಮಯ : ಸಂಜೆ 5.00 ಗಂಟೆಗೆ**
ನರಕಾಸುರ ಮೋಕ್ಷ–ಯಕ್ಷಗಾನ ತೆಂಕುತಿಟ್ಟು, ಚಿತ್ತಾವರ ಮಹಿಳಾ ಯಕ್ಷಗಾನ ಮಂಡಳಿ, ಬೆಂಗಳೂರು ಮತ್ತು ಜಟಾಯು ಮೋಕ್ಷ–ಮಕ್ಕಳ ಯಕ್ಷಗಾನ–ಬಡಗುತಿಟ್ಟು, ಯಕ್ಷಗಾನ ಕೇಂದ್ರ ಉಡುಪಿ.

## ನವೆಂಬರ್ 20 ಬುಧವಾರ

**ಸಮಯ : ಸಂಜೆ 6.00 ಗಂಟೆಗೆ**
ಶಿವ ದೇಶ ರಂಗಯಾತ್ರೆ
ಶ್ರೀ ಶಿವಕುಮಾರ ಕಲಾಸಂಘ(ರಿ) ಸಾಣೇಹಳ್ಳಿ ಕಲಾವಿದರಿಂದ
ಹಿಂದಿ ನಾಟಕ :ಮರಣ್ ಹೀ ಮಹಾನವಮಿ
ಮೂಲ: ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿ
ಹಿಂದಿ ಅನುವಾದ : ಡಾ. ಪ್ರಭಾಶಂಕರ ಪ್ರೇಮಿ
ನಿರ್ದೇಶನ : ಕೆ.ಜಿ. ಕೃಷ್ಣಮೂರ್ತಿ

## ನವೆಂಬರ್ 21 ಗುರುವಾರ

**ಸಮಯ : ಸಂಜೆ 6.00ಗಂಟೆಗೆ**
ಮೈ ಬಾವರಿ ಚೆನ್ನ್ ಕೀ
ಮೂಲ : ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿ
ಹಿಂದಿ ಅನುವಾದ : ಡಾ. ಅಬ್ದುಲ್ ಹಮೀದ್
ನಿರ್ದೇಶನ : ಶ್ರೀಶ್ ಡೋಬಾಲ್

## ನವೆಂಬರ್ 24 ಭಾನುವಾರ

**ಸಮಯ : ಸಂಜೆ 4.00 ಗಂಟೆಗೆ**
ದೆಹಲಿ ಕನ್ನಡ ಕಲಾವಿದರಿಂದ
ಸಾಂಸ್ಕೃತಿಕ ವೈವಿಧ್ಯ– ಕನ್ನಡ ಸಾಹಿತ್ಯ ಯಾತ್ರೆ (ಪರಿಕಲ್ಪನೆ ಮತ್ತು ನಿರ್ದೇಶನ: ಸಿ.ಆರ್. ಪದ್ಮಶ್ರೀ) ಮತ್ತು ವಿದ್ಯಾರ್ಥಿ ವೇತನ ವಿತರಣೆ

## ನವೆಂಬರ್ 30 ಶನಿವಾರ

**ಸಮಯ : ಸಂಜೆ 6.00ಗಂಟೆಗೆ**
ದೆಹಲಿಯ ಕನ್ನಡ ಮಕ್ಕಳ ಸಾಂಸ್ಕೃತಿಕ ಪ್ರತಿಭಾ ಪ್ರದರ್ಶನ ಮತ್ತು
ರಂಗಗೀತೆಗಳು
ರಂಗಮಂಟಪ ಕಲಾವಿದರು, ಬೆಂಗಳೂರು


## ಡಿಸೆಂಬರ್ 1 ಭಾನುವಾರ

**ಸಮಯ : ಸಂಜೆ 6.00ಗಂಟೆಗೆ**
ನಾಟಕ : ಅನಭಿಜ್ಞಾಶಾಕುಂತಲ
ಪ್ರಸಂಗ ಥಿಯೇಟರ್ ಗ್ರೂಪ್, ಬೆಂಗಳೂರು ಕಲಾವಿದರಿಂದ

# ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ


## ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ

ಶ್ರೀ ಚಿನ್ಮಯ್ ಬಿ.ಆರ್ ಅವರ
ಚಿತ್ರಕಲಾ ಪ್ರದರ್ಶನ
ಅಕ್ಟೋಬರ್ 27 ರಿಂದ ನವೆಂಬರ್ 12, 2013
ಸಮಯ : ಬೆಳಿಗ್ಗೆ 11 ರಿಂದ ಸಾಯಂಕಾಲ 8.00 ರತನಕ



ದೆಹಲಿಯಲ್ಲಿ ಹಂಪಿ
ಶ್ರೀ ಆನಂದ ಈಶ್ವರಪ್ಪ ಮುರಗೋಡ ಮತ್ತು
ಗಣೇಶ ದೊಡ್ಡಮನಿ ಅವರ
ಛಾಯಾ ಚಿತ್ರ ಪ್ರದರ್ಶನ
ನವೆಂಬರ್ 14 ರಿಂದ
ನವೆಂಬರ್ 30, 2013
ಸಮಯ : ಬೆಳಿಗ್ಗೆ 11 ರಿಂದ
ಸಾಯಂಕಾಲ 8.00 ರ ತನಕ





## ಹಿಂದೂಸ್ತಾನಿ ಸಂಗೀತ



ಪಂಡಿತ್ ಸೋಮನಾಥ್ ಮರಡೂರ್ ಅವರಿಂದ ಹಿಂದೂಸ್ತಾನಿ ಸಂಗೀತ ತರಗತಿಗಳು ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ

## ತಬಲಾ ಕಲಿಕೆ



ಶ್ರೀ ಸುಧೀರ್ ಫಡ್ನೀಸ್ ಅವರಿಂದ ತಬಲಾ ಕಲಿಕೆ ತರಗತಿ ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ.

ಆಸಕ್ತಿಯುಳ್ಳವರು ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿ
: 26109615 / 65643615 8860848584 / 8860848585

## ವೈದ್ಯಕೀಯ ಸಲಹೆಗಳು



**ಡಾ. ನಿರಂಜನ್ ನಾಯ್ಕ್** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ
*ಭಾನುವಾರ, 16 ನವೆಂಬರ್ 2013ರಂದು ಬೆಳಿಗ್ಗೆ 10 ಗಂಟೆಯಿಂದ.*

**ಡಾ. ಭೀಮ್ ಭಟ್** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ
*ಭಾನುವಾರ, 30 ನವೆಂಬರ್ 2013ರಂದು ಸಾಯಂಕಾಲ 4 ಗಂಟೆಯಿಂದ.*

ಶ್ರೀ ಸುಧೀರ್ ಫಡ್ನೀಸ್ ಅವರು ಆಸಕ್ತ ದೆಹಲಿ ಕನ್ನಡಿಗರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ತಬಲಾ ಕಲಿಕಾ ತರಗತಿಯನ್ನು ಆರಂಭಿಸಿದರು.





ದೆಹಲಿ ಕರ್ನಾಟಕ ಸಂಘದಲಿ ಪಂಡಿತ್ ಸೋಮನಾಥ್ ಮರಡೂರ್ ಅವರಿಂದ ಆರಂಭಗೊಂಡ ಹಿಂದೂಸ್ತಾನಿ ಸಂಗೀತ ತರಬೇತಿಯಲ್ಲಿ ಕಲಿಯುತ್ತಿರುವ ಆಸಕ್ತ ದೆಹಲಿ ಕನ್ನಡಿಗರು

# ‘ಬಹುತ್ವ’ ಕನ್ನಡ ಸಂಸ್ಕೃತಿಯ ಲಕ್ಷಣ : ಪ್ರೊ. ವಿವೇಕ ರೈ




ಒಂದೇ ಭಾಷೆಯನ್ನು ಬೇರೆ ಬೇರೆ ಬಗೆಯಲ್ಲಿ ಮಾತನಾಡುವ ಮತ್ತು ಒಂದೇ ಸಮುದಾಯದ ಜನರು ವಿವಿಧ ಬಗೆಯ ಮಾತೃಭಾಷೆಯನ್ನು ಹೊಂದಿರುವ ರಾಜ್ಯ ಕರ್ನಾಟಕ. ‘ಬಹುತ್ವ’ ಕನ್ನಡ ಸಂಸ್ಕೃತಿಯ ಪ್ರಮುಖ ಲಕ್ಷಣ ಎಂಬುದಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಉಪಕುಲಪತಿ, ಹಿರಿಯ ವಿದ್ವಾಂಸ ಪ್ರೊ. ಬಿ.ಎ. ವಿವೇಕ ರೈ ಅಭಿಪ್ರಾಯಪಟ್ಟರು.

ಅವರು ಅಕ್ಟೋಬರ್ 27ರಂದು ದೆಹಲಿ ಕರ್ನಾಟಕ ಸಂಘದ ನವೀಕೃತ ವಿಚಾರ ಸಂಕಿರಣ ಸಭಾಭವನವನ್ನು ಉದ್ಘಾಟಿಸಿ ನಂತರ ‘ಭಾಷಾ ರಂಗೋಲಿ’ ಕಾರ್ಯಕ್ರಮದ ಸಮನ್ವಯಕಾರರಾಗಿ ಮಾತನಾಡಿದರು.

ಇನ್ನೊಂದು ಭಾಷೆಯಿಂದ ಸ್ವೀಕರಿಸುವ ಮತ್ತು ಅನ್ಯ ಭಾಷಿಕರನ್ನು ಕನ್ನಡದೊಂದಿಗೆ ಒಳಗೊಳ್ಳುವಂತೆ ಮಾಡುವ ವಿಶಿಷ್ಟತೆ ಕನ್ನಡಕ್ಕಿದೆ ಎಂದು ವಿವೇಕ ರೈ ಅವರು ವಿವರಿಸಿದರು.

ಕನ್ನಡ, ತುಳು, ಕೊಡವ, ಬ್ಯಾರಿ ಮತ್ತು ಕೊಂಕಣಿ ಭಾಷೆಯ ವಿದ್ವಾಂಸರು ಒಂದೇ ಕಡೆ ಸೇರಿ ತಮ್ಮ ಭಾಷೆ ಮತ್ತು ಸಂಸ್ಕೃತಿಯ ಕುರಿತು ಮಾತನಾಡಿದ ‘ಭಾಷಾ ರಂಗೋಲಿ’ ವಿನೂತನ ಕಾರ್ಯಕ್ರಮವಾಗಿತ್ತು.

ಆರಂಭದಲ್ಲಿ ಖ್ಯಾತ ಜಾನಪದ ವಿದ್ವಾಂಸ ಡಾ. ಚಿನ್ನಪ್ಪ ಗೌಡ ಅವರು ತುಳು ಭಾಷೆಯ ಕುರಿತು ಮಾತನಾಡಿದರು. ಸಂಶೋಧನೆಯ ಸಂದರ್ಭದಲ್ಲಿ ಒಮ್ಮೆ ಕಲಾವಿದನೊಬ್ಬ ‘ನಾನಿರುವಾಗ ನನ್ನ ಭಾವಚಿತ್ರ ಏಕೆ?’ ಎಂದು ಪ್ರಶ್ನಿಸಿದ್ದನ್ನು ಸ್ಮರಿಸಿದ ಅವರು ತುಳು ಭಾಷಿಕರು ಎಷ್ಟರ ಮಟ್ಟಿಗೆ ಜನಪದೀಯರಾಗಿದ್ದರು ಎಂಬುದನ್ನು ಮಾರ್ಮಿಕವಾಗಿ ತಿಳಿಸಿದರು.



‘ಸುಧಾ’ ಮತ್ತು ‘ಪ್ರಜಾವಾಣಿ’ ಪತ್ರಿಕೆಯ ಉಪ ಸಂಪಾದಕ ಬಿ.ಎಂ. ಹನೀಫ್ ಅವರು, ಕರ್ನಾಟಕದ ಮುಸ್ಲಿಂ ಸಮುದಾಯವೊಂದರಲ್ಲೇ ವಿವಿಧ ಪ್ರದೇಶಗಳಲ್ಲಿ ಉರ್ದು, ಬ್ಯಾರಿ, ಕೊಂಕಣಿ, ಮಾಪಿಳ್ಳೆ ಮತ್ತು ಕನ್ನಡ ಮಾತೃಭಾಷೆಯಾಗಿರುವ ವಿಷಯವನ್ನು ಸ್ವಾರಸ್ಯಕರವಾಗಿ ಬಿಚ್ಚಿಟ್ಟರು. ಬ್ಯಾರಿ ಭಾಷೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿ ಬೆಳೆಸಲು ಎದುರಾದ ಸವಾಲುಗಳನ್ನು ಅವರು ನೆನೆದರು.

‘ಕೊಡವ’ ಎಂದರೆ ಸೈನ್ಯ, ಕ್ರೀಡೆ ಮತ್ತು ಕಾವೇರಿ ನದಿ ಎಂದು ಭಾವಿಸಲಾಗಿದೆ. ಆದರೆ ಇಲ್ಲಿನ ಸಾಹಿತ್ಯವೂ ಸಮೃದ್ಧವಾಗಿದೆ. ‘ಪಟ್ಟೋಲೆ ಪಳಮೆ’ಯಂತಹ ಕೃತಿಗಳು ಅದಕ್ಕೆ ಒಂದು ಉದಾಹರಣೆ ಎಂಬುದಾಗಿ ಗೋಣಿಕೊಪ್ಪಲ್ ಕಾವೇರಿ ಕಾಲೇಜಿನ ಸಹ ಪ್ರಾಧ್ಯಾಪಿಕೆ ಡಾ. ರೇಖಾ ವಸಂತ್ ವಿಚಾರ ಮಂಡಿಸಿದರು.









ಮಂಗಳೂರು ವಿಶ್ವ ವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ. ಜಯಂತ್ ನಾಯಕ್ ಅವರು ಭಾಷೆ ಮತ್ತು ಸಾಹಿತ್ಯವು ಭಾವೈಕ್ಯತೆ ಮೂಡಿಸುತ್ತದೆ ಎಂದರು. ಅವರು ಕೊಂಕಣಿ ಭಾಷೆಯಲ್ಲಿನ ಆಪ್ತತೆಯನ್ನು ಸಂದರ್ಭೋಚಿತವಾಗಿ ಸ್ಮರಿಸಿದರು. ಒಂದು ಕೊಂಕಣಿ ಹಾಡನ್ನೂ ಮಧುರವಾಗಿ ಹಾಡಿದರು.

ಸಾಹಿತಿಗಳಾದ ಡಾ. ಟಿ.ಎಸ್. ಸತ್ಯನಾಥ್, ಡಾ. ಪುರುಷೋತ್ತಮ ಬಿಳಿಮಲೆ ಮೊದಲಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಸ್ವಾಗತಿಸಿದರು. ಕೋಶಾಧಿಕಾರಿ ಡಾ. ವೈ ಅವನೀಂದ್ರನಾಥ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು. ಅ

***ಡಾ. ಅವನೀಂದ್ರನಾಥ್ ರಾವ್***

### ನವೀಕೃತ ವಿಚಾರ ಸಂಕಿರಣ ಸಭಾಭವನ

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದಲ್ಲಿರುವ ವಿಚಾರ ಸಂಕಿರಣ ಸಭಾಭವನದಲ್ಲಿ ಉತ್ತಮ ಧ್ವನಿ ವ್ಯವಸ್ಥೆ, ಅಡಿಯೋ ವಿಶ್ಯುವಲ್ ಪ್ರಸೆಂಟೇಶನ್‌ಗಳಿಗಾಗಿ ಪ್ರೊಜೆಕ್ಟರ್ ಹಾಗೂ ಹೊಸ ಆಸನಗಳನ್ನು ಅಳವಡಿಸಿ ಸಭಾಭವನವನ್ನು ಆಧುನಿಕ ಗೊಳಿಸಲಾಗಿದೆ. ಸಂಘದ ಸಮಿತಿ ಸಭೆ ಅಲ್ಲದೇ ಇತರ ಸಭಾ ಕಾರ್ಯಕ್ರಮಗಳನ್ನು ನಡೆಸಲು ಈ ಸಭಾ ಭವನವನ್ನು ಉಪಯೋಗಿಸಲಾಗುತ್ತದೆ.

# ಹೊಯ್ಸಳ ಕ್ರಿಕೆಟರ್ಸ್‌ಗೆ ಅಂಬಿಕೇಶ್ ಟ್ರೋಫಿ

ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡವು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯ 2013ರ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಫೈನಲ್ ಪಂದ್ಯದ ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಭಾರತ ಕ್ರಿಕೆಟ್ ತಂಡದ ಆಟಗಾರ ಮೊಹಮ್ಮದ್ ಕೈಫ್ ಅವರು ಅಕ್ಟೋಬರ್ 20ರಂದು ದೆಹಲಿಯ ವಸಂತಕುಂಜ್‌ನಲ್ಲಿರುವ ಕಥೂರಿಯ ಪಬ್ಲಿಕ್ ಸ್ಕೂಲ್‌ನ ಮೈದಾನದಲ್ಲಿ ನೀಡಿದರು. ಅದೇ ಮೈದಾನದಲ್ಲಿ ಅಭ್ಯಾಸ ನಡೆಸುತ್ತಿದ್ದ ಮೊಹಮ್ಮದ್ ಕೈಫ್ ಅವರು ಬಂದು ಎಲ್ಲ ಆಟಗಾರರನ್ನು ಪ್ರೋತ್ಸಾಹಿಸಿದರು. ದೆಹಲಿ ಕರ್ನಾಟಕ ಸಂಘದ ವತಿಯಿಂದ ಮೊಹಮ್ಮದ್ ಕೈಫ್ ಅವರನ್ನು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಹೂಗುಚ್ಛ ಹಾಗೂ ಜಂಟಿ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ ಅವರು ಸಂಘದ ಸ್ಮರಣಿಕೆ ನೀಡಿ ಅಭಿನಂದಿಸಿದರು.

ಫೈನಲ್ ಪಂದ್ಯವು ಬೆಳ್ಳಿಯಪ್ಪ ಗ್ರೂಪ್ಸ್ ಮತ್ತು ಹೊಯ್ಸಳ ಕ್ರಿಕೆಟರ್ಸ್, ಗುರ್‌ಗಾಂವ್ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಹೊಯ್ಸಳ ತಂಡವು 95ರನ್‌ಗಳನ್ನು ಗಳಿಸಿ ಬೆಳ್ಳಿಯಪ್ಪ ಗ್ರೂಪ್ಸ್‌ಗೆ 96 ರನ್‌ಗಳ ಸವಾಲನ್ನೊಡ್ಡಿತ್ತು. ಈ ಸವಾಲನ್ನು ಬೆನ್ನಟ್ಟಿದ ಬೆಳ್ಳಿಯಪ್ಪ ಗ್ರೂಪ್ಸ್ ನಿಗದಿತ 12 ಓವರ್‌ಗಳಲ್ಲಿ ಕೇವಲ 89ರನ್ನುಗಳನ್ನು ಮಾತ್ರ ಗಳಿಸಿತು. ಈ ಪಂದ್ಯದಲ್ಲಿ ಉತ್ತಮ ಬೌಲಿಂಗ್ ಮಾಡಿದ ಪರಮೇಶ್ ಅವರು ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಪುರಸ್ಕೃತರಾದರು.

ಕ್ರಿಕೆಟ್ ಪಂದ್ಯಾವಳಿಯ ಮೊದಲನೆ ಸೆಮಿಫೈನಲ್ ಪಂದ್ಯಾವಳಿಯು ದೆಹಲಿ ಮಿತ್ರ ಮತ್ತು ಬೆಳ್ಳಿಯಪ್ಪ ಗ್ರೂಪ್ಸ್‌ನೊಂದಿಗೆ ನಡೆಯಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ದೆಹಲಿ ಮಿತ್ರ ತಂಡವು ಬೆಳ್ಳಿಯಪ್ಪ ಗ್ರೂಪ್ಸ್‌ಗೆ ಜಯಗಳಿಸಲು 71 ರನ್‌ಗಳ ಲಕ್ಷ್ಯವನ್ನು ನೀಡಿತು. ಈ ಲಕ್ಷ್ಯವನ್ನು ಕೇವಲ 7.1 ಓವರ್‌ಗಳಲ್ಲಿ ಸಾಧಿಸಿ ಬೆಳ್ಳಿಯಪ್ಪ ಗ್ರೂಪ್ಸ್ ಫೈನಲ್ ಪ್ರವೇಶಿಸಿತು. ಬೆಳ್ಳಿಯಪ್ಪ ಗ್ರೂಪ್ಸ್‌ನ ಸುರೇಂದ್ರ ಮೊದಲನೇ ಸೆಮಿಫೈನಲ್‌ನ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು.

ಎರಡನೇ ಸೆಮಿಫೈನಲ್ ಹೊಯ್ಸಳ ಕ್ರಿಕೆಟರ್ಸ್, ಗುರ್‌ಗಾಂವ್ ಮತ್ತು ಜೆ.ಎಸ್.ಎಸ್. ಆರ್.ಡಬ್ಲ್ಯು.ಎ. ತಂಡದೊಂದಿಗೆ ನಡೆಯಿತು. ಟಾಸ್ ಗೆದ್ದ ಜೆ.ಎಸ್.ಎಸ್. ಆರ್.ಡಬ್ಲ್ಯು.ಎ. ತಂಡ ಫೀಲ್ಡಿಂಗ್ ಆಯ್ದುಕೊಂಡು ಹೊಯ್ಸಳ ತಂಡವನ್ನು ಬ್ಯಾಟಿಂಗ್ ಮಾಡಲು ಆಹ್ವಾನಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಹೊಯ್ಸಳ ಕ್ರಿಕೆಟರ್ಸ್ ತಂಡ ಗೆಲುವಿಗೆ 118ರನ್‌ಗಳ ಲಕ್ಷ್ಯವನ್ನು ನೀಡಿತು. ಈ ಲಕ್ಷ್ಯವನ್ನು ಬೆನ್ನಟ್ಟಿದ ಜೆ.ಎಸ್.ಎಸ್. ಆರ್. ಡಬ್ಲ್ಯು.ಎ. ತಂಡ ಕೇವಲ 63ರನ್‌ಗಳನ್ನು ಮಾತ್ರ ಗಳಿಸಲು ಸಾಧ್ಯವಾಯಿತು. 32 ರನ್ನುಗಳನ್ನು ಗಳಿಸಿದ ಎ. ಜಾರ್ಜ್ ಅವರು ಈ ಪಂದ್ಯದ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಪಾತ್ರರಾದರು.

ಈ ವರ್ಷದ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯನ್ನು ಶ್ರೀ ಶಿವರಾಮ್ ರೈ, ಶ್ರೀ ಬೆಳ್ಳಿಯಪ್ಪ ಟಿ.ಪಿ. ಮತ್ತು ಶ್ರೀ ಅಶೋಕ್ ಕುಮಾರ್ ವಿ. ಅವರು ಶಿಸ್ತುಬದ್ಧವಾಗಿ ನಡೆಸಿಕೊಟ್ಟರು.

ಅಕ್ಟೋಬರ್ 12ರಂದು ಪ್ರಾರಂಭಗೊಂಡ ಈ ಪಂದ್ಯಾವಳಿಯಲ್ಲಿ ದೆಹಲಿಯ ವಿವಿಧ ಸಂಘ ಸಂಸ್ಥೆಗಳ ಒಟ್ಟು 16 ತಂಡಗಳು ಭಾಗವಹಿಸಿದವು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಬ್ಯಾಟಿಂಗ್ ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಬೌಲಿಂಗ್ ಮಾಡುವುದರ ಮೂಲಕ ಪಂದ್ಯಾವಳಿಗೆ ಚಾಲನೆ ನೀಡಿದರು. ಅ

*ಅಭಿಮತ ವರದಿ*

**ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ**

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಕೆ.ಆರ್. ನಾಗರಾಜ್ ಹಾಗೂ ಲಲಿತಾ ನಾಗರಾಜ್ ಅವರ ಸುಪುತ್ರ ಅಂಬಿಕೇಶ್ ಅವರು 5ನೇ ಸೆಪ್ಟೆಂಬರ್ 2000ದಂದು ದೆಹಲಿಯ ಇಂಡಿಯಾಗೇಟ್ ಬಳಿ ರಸ್ತೆ ಅಪಘಾತದಲ್ಲಿ ವಿಧಿವಶರಾದರು. ಕ್ರಿಕೆಟ್ ಅವರಿಗೆ ಅತ್ಯಂತ ಪ್ರಿಯವಾಗಿದ್ದ ಕ್ರೀಡೆಯಾಗಿದ್ದರಿಂದ ಅವರ ನೆನಪಿನಲ್ಲಿ 2001ರಿಂದ ಪ್ರಾರಂಭವಾದ ಕ್ರಿಕೆಟ್ ಪಂದ್ಯಾವಳಿಯನ್ನು ಅಂಬಿಕೇಶ್ ಕ್ರಿಕೆಟ್ ಸ್ಮಾರಕ ಪಂದ್ಯಾವಳಿ ಎಂದು ಆಯೋಜಿಸಲಾಗುತ್ತಿದೆ. ಈ ಕ್ರಿಕೆಟ್ ಪಂದ್ಯಾವಳಿ ಒಂದು ನಿರಂತರ ಪರ್ಯಾಯ ಫಲಕವನ್ನು ಹೊಂದಿದೆ.








# ದೆಹಲಿ ಕರ್ನಾಟಕ ಸಂಘ

# ಅಂಬಿಕೇಶ್ ಕ್ರಿಕೆಟ್ ಸ್ಮಾರಕ ಪಂದ್ಯಾವಳಿ 2013




# ದೆಹಲಿ ಕರ್ನಾಟಕ ಸಂಘದ ಡಾ.ಶಿವರಾಮ ಕಾರಂತ ಪ್ರಶಸ್ತಿ

ಕಾದಂಬರಿಕಾರ, ಸಾಹಿತಿ, ಚಿಂತಕ, ಪರಿಸರವಾದಿ ಡಾ. ಕೋಟ ಶಿವರಾಮ ಕಾರಂತರ ಆಸಕ್ತಿಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರಿಗೆ ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಎರಡು ವರ್ಷಗಳಿಗೊಮ್ಮೆ ಡಾ.ಶಿವರಾಮ ಕಾರಂತ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಡಾ. ಶಿವರಾಮ ಕಾರಂತ ಅವರ ಸವಿನೆನಪಿನಲ್ಲಿ 1998ರಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಆರಂಭ ಮಾಡಿದ್ದು ಮೊದಲ ಪ್ರಶಸ್ತಿಯನ್ನು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಮಹತ್ತರ ಸಾಧನೆಗಾಗಿ ಡಾ. ಯಶವಂತ ಚಿತ್ತಾಲ ಅವರಿಗೆ ಹಾಗೂ ದ್ವಿತೀಯ ಪ್ರಶಸ್ತಿಯನ್ನು ವಿಜ್ಞಾನ ಮತ್ತು ಪರಿಸರ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿದ ಶ್ರೀ ಜಿ.ಟಿ.ನಾರಾಯಣ ರಾವ್ ಅವರಿಗೆ ನೀಡಲಾಗಿತ್ತು.

2010ರ ಪ್ರಶಸ್ತಿಗೆ ಯಕ್ಷಗಾನ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಶ್ರೀ ಬನ್ನಂಜೆ ಸಂಜೀವ ಸುವರ್ಣ ಹಾಗೂ 2012ರ ಪ್ರಶಸ್ತಿಗೆ ಪರಿಸರ ಕ್ಷೇತ್ರದಲ್ಲಿ ಸಾಧನೆಗೈದ ಶ್ರೀಮತಿ ಸಾಲುಮರದ ತಿಮ್ಮಕ್ಕನವರಿಗೆ ನೀಡಲಾಗುತ್ತಿದೆ. ಈ ಆಯ್ಕೆಯನ್ನು ಸಮಿತಿಯ ಸದಸ್ಯರಾಗಿ ಹಿರಿಯ ದೆಹಲಿ ಕನ್ನಡಿಗ ಶ್ರೀ ಐ. ರಾಮಮೋಹನ್ ರಾವ್, ಜಾನಪದ ತಜ್ಞ ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ಸಂಚಾಲಕರಾಗಿ ಡಾ.ವೈ ಅವನೀಂದ್ರನಾಥ್ ರಾವ್ ಅವರನ್ನೊಳಗೊಂಡ ಆಯ್ಕೆ ಸಮಿತಿ ಮಾಡಿದೆ. ಈ ಪ್ರಶಸ್ತಿಯು 25 ಸಾವಿರ ರೂಪಾಯಿಗಳ ನಗದು ಹಣ, ಅಭಿನಂದನಾ ಪತ್ರ, ಸ್ಮರಣಿಕೆ ಇತ್ಯಾದಿಗಳನ್ನೊಳಗೊಂಡಿದೆ.

ಪ್ರಶಸ್ತಿಗೆ ಆಯ್ಕೆಯಾದ ಬನ್ನಂಜೆ ಸಂಜೀವ ಸುವರ್ಣ ಮತ್ತು ಸಾಲುಮರದ ತಿಮ್ಮಕ್ಕನವರಿಗೆ ಈ ಪ್ರಶಸ್ತಿಯನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರಾದ ಶ್ರೀ ಆಸ್ಕರ್ ಫೆರ್ನಾಂಡಿಸ್ ಅವರು ನವೆಂಬರ್ 17ರ ಹಮ್ಮಿಕೊಂಡಿರುವ ಸಮಾರಂಭದಲ್ಲಿ ಪ್ರಶಸ್ತಿ ನೀಡಲಿರುವರು. ಅಭಿಮತದ ಓದುಗರಿಗೆ ಪ್ರಶಸ್ತಿ ವಿಜೇತರ ಪರಿಚಯ ನೀಡಲಾಗಿದೆ. ಅ



ಚಿತ್ರ ಕೃಪೆ: ಯಜ್ಞ ಮಂಗಳೂರು

## ಬನ್ನಂಜೆ ಸಂಜೀವ ಸುವರ್ಣ

ಡಾ. ಶಿವರಾಮ ಕಾರಂತರ ಮಾನಸ ಪುತ್ರರೆಂದೇ ಪ್ರಸಿದ್ಧರಾಗಿರುವ ಬನ್ನಂಜೆ ಸಂಜೀವ ಸುವರ್ಣ ಅವರು 12 ಅಕ್ಟೋಬರ್ 1955 ರಲ್ಲಿ ಜನಿಸಿದರು. ಇವರು ಯಕ್ಷಗಾನಕ್ಕೆ ನೀಡಿದ ಕೊಡುಗೆ ಅನುಪಮವಾದುದು. 1971ರಿಂದ 1974ರವರೆಗೆ ಉಡುಪಿಯ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿದ್ದ ಅವರು 1975ರಲ್ಲಿ ವೃತ್ತಿ ಮೇಳ ಸೇರಿದರು. ಸಾಲಿಗ್ರಾಮ, ಹಿರಿಯಡ್ಕ ಮತ್ತು ಗೋಳಿಗರಡಿ ಮೇಳಗಳಲ್ಲಿ ವೇಷಧಾರಿಯಾಗಿ ಕೆಲಸ ಮಾಡಿದ ಅವರು 1892ರಲ್ಲಿ ಡಾ. ಶಿವರಾಮ ಕಾರಂತರ ಸುಪ್ರಸಿದ್ಧವಾದ ಯಕ್ಷರಂಗ ಸೇರಿದರು. ಯಕ್ಷರಂಗದಲ್ಲಿ ಅವರು ನಿರ್ವಹಿಸುತ್ತಿದ್ದ ಅಭಿಮನ್ಯು ಪಾತ್ರವು ಇಂದು ಜಗತ್ಪ್ರಸಿದ್ಧವಾಗಿದೆ. ತಮ್ಮ ಅಚ್ಚುಕಟ್ಟಾದ ವೇಷ, ಕುಣಿತಗಳಿಂದ ಕಾರಂತರ ಆಪ್ತವಲಯಕ್ಕೆ ಸೇರಿದ ಅವರು ಯಕ್ಷರಂಗದಲ್ಲಿ ಮುಖ್ಯ ಪಾತ್ರಗಳನ್ನು ನಿರ್ವಹಿಸಿದರು. ಅವರು ಅನುಭವ, ಶಿಸ್ತು, ನಟನಾಶೈಲಿ ಮತ್ತು ತಿಳುವಳಿಕೆಗಳನ್ನು ಕಂಡ ಡಾ. ಶಿವರಾಮ ಕಾರಂತರು ಸುವರ್ಣರನ್ನು 1984ರಲ್ಲಿ ಯಕ್ಷಗಾನ ಕೇಂದ್ರದ ಗುರುಗಳನ್ನಾಗಿ ನೇಮಿಸಿದರು. ಗುರುಗಳಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ಯಕ್ಷಗಾನ ಕಲಿಸಿದ ಸಂಜೀವ ಸುವರ್ಣರು 2006ರಿಂದ ಅದೇ ಕೇಂದ್ರದ ಪ್ರಾಂಶುಪಾಲರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರಿಂದ ಯಕ್ಷಗಾನ ಕಲಿತ ವಿದ್ಯಾರ್ಥಿಗಳನೇಕರು ಇಂದು ವ್ಯವಸಾಯಿ ಮೇಳದ ನುರಿತ ಕಲಾವಿದರಾಗಿ ಕೆಲಸ ಮಾಡುತ್ತಿದ್ದಾರೆ.

ಸುವರ್ಣರು ಪರಂಪರಾಗತ ಯಕ್ಷಗಾನದಲ್ಲಿ ವಿಶೇಷ ಪರಿಣತಿ ಸಾಧಿಸುವುದರ ಜೊತೆಗೆ ಅನೇಕ ಪ್ರಯೋಗಗಳನ್ನು ಕೂಡಾ ಮಾಡಿದ ಸೃಜನಶೀಲ ಕಲಾವಿದ. ಅವರ ಏಕ ವ್ಯಕ್ತಿ ಯಕ್ಷಗಾನ ಪ್ರಸಂಗಗಳಾದ ಪಂಚವಟಿ, ವಾಲಿ ವಧೆ ಮತ್ತು ಏಕಲವ್ಯ ಪ್ರದರ್ಶನಗಳು ಕಲಾ ವಿಮರ್ಶಕರ ಗಮನ ಸೆಳೆದಿವೆ. ಯಕ್ಷಗಾನದಿಂದ ಮರೆಗೆ ಸಂದಿದ್ದ ಪೂರ್ವರಂಗಕ್ಕೆ (ಪಾಂಡವರ ಒಡ್ಡೋಲಗ, ರಾಮ ಲಕ್ಷ್ಮಣರ ಒಡ್ಡೋಲಗ, ರಾಕ್ಷಸ–ರಾಕ್ಷಸಿಯರ ಒಡ್ಡೋಲಗಗಳು, ಕಿರಾತ ಒಡ್ಡೋಲಗ, ಹನುಮಂತನ ಒಡ್ಡೋಲಗ, ಶ್ರೀಕೃಷ್ಣನ ಒಡ್ಡೋಲಗ ಇತ್ಯಾದಿ) ಮತ್ತೆ ಕಾಯಕಲ್ಪ ನೀಡಿದವರೂ ಇವರೇ. ಮರಾಠಿ, ಹಿಂದಿ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲೂ ಸುವರ್ಣರು ಯಕ್ಷಗಾನ ಪ್ರದರ್ಶಿಸಿದ್ದಾರೆ.

ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ, ಚೈನಾ, ಜಪಾನ್, ನ್ಯೂಯಾರ್ಕ್, ಲಂಡನ್, ಸಿಂಗಾಪುರ, ಆಸ್ಟ್ರೇಲಿಯಾ, ಹಾಂಗ್‌ಕಾಂಗ್, ಇಟಲಿ, ಯುಗೋಸ್ಲಾವಿಯಾ, ಬಲ್ಗೇರಿಯಾ, ಟರ್ಕಿ, ಮಾಸ್ಕೋ, ಕುವೈತ್, ಹಂಗೇರಿ, ಪೆರು, ಬ್ರೆಜಿಲ್, ಜರ್ಮನಿ, ಸ್ವೀಡನ್ ಮೊದಲಾಡೆಗಳಲ್ಲಿ ಪ್ರವಾಸ ಮಾಡಿರುವ ಸಂಜೀವ ಸುವರ್ಣರು ಯಕ್ಷಗಾನವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸಿದ ಆದ್ಯರಲ್ಲಿ ಪ್ರಮುಖರು. ಅವರು ನಮ್ಮ ಕಾಲದ ಅತಿ ದೊಡ್ಡ ಕಲಾವಿದ. ಅ





## ಸಾಲು ಮರದ ತಿಮ್ಮಕ್ಕ

ಸಾಲು ಮರದ ತಿಮ್ಮಕ್ಕ ಅವರು ಸಮೀಪದ ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಹುಲಿಕಲ್ ಗ್ರಾಮದವರು. ಇವರಿಗೆ ಶಾಲಾ ಶಿಕ್ಷಣ ಲಭಿಸಿಲ್ಲ. ಕೂಲಿ ಕಾರ್ಮಿಕ ಚಿಕ್ಕಯ್ಯನವರನ್ನು ವಿವಾಹವಾದ ತಿಮ್ಮಕ್ಕನವರಿಗೆ ಮಕ್ಕಳಿಲ್ಲ. ಈ ದಂಪತಿಗಳು ಗಿಡಗಳನ್ನೇ ಮಕ್ಕಳೆಂದು ತಿಳಿದು ಸಾಕಿ ಬೆಳೆಸಿದರು. ಆರಂಭದಲ್ಲಿ ಊರ ಸಮೀಪದ ಕಡೂರು ಗ್ರಾಮದ ರಸ್ತೆಯಲ್ಲಿ ಹತ್ತು ಅರಳೀ ಗಿಡಗಳನ್ನು ನೆಟ್ಟು ಬೆಳೆಸಿದರು. ನಂತರ ಈ ಸಂಖ್ಯೆ 400 ಮೀರಿತು. ಅವರು ನಾಲ್ಕು ಕಿಲೋ ಮೀಟರ್ ನಡೆದು ಗಿಡಗಳಿಗೆ ನೀರು ಹಾಕುತ್ತಿದ್ದರು. ಗಿಡಗಳನ್ನು ರಕ್ಷಿಸಲು ಮುಳ್ಳಿನ ಬೇಲಿ ಹಾಕುತ್ತಿದ್ದರು. ಈಗ ಮರವಾಗಿ ಬೆಳೆದ ಈ ಗಿಡಗಳು ಸರಕಾರದ ಅಧೀನದಲ್ಲಿದೆ.

ತಿಮ್ಮಕ್ಕ ಅವರು ಇದುವರೆಗೆ 8000ಕ್ಕೂ ಹೆಚ್ಚು ಮರಗಳನ್ನು ಬೆಳೆಸಿದ್ದಾರೆ. ಪರಿಸರ ತಜ್ಞರ ಪ್ರಕಾರ ಇದರ ಬೆಲೆ ರೂ. 150ರ ಕೋಟಿ ಮೀರುತ್ತದೆ. ತಿಮ್ಮಕ್ಕ ಮಳೆಯ ನೀರನ್ನು ಸಂಗ್ರಹಿಸಲು ಹಳ್ಳಿಗಳಲ್ಲಿ ಟ್ಯಾಂಕುಗಳನ್ನೂ ನಿರ್ಮಿಸಿದ್ದಾರೆ.

ತಿಮ್ಮಕ್ಕನವರಿಗೆ ಭಾರತ ಸರಕಾರ ಪರಿಸರ ಮತ್ತು ಅರಣ್ಯ ಇಲಾಖೆಯ 'ಇಂದಿರಾ ಪ್ರಿಯದರ್ಶಿನಿ ವೃಕ್ಷ ಮಿತ್ರ' ಪ್ರಶಸ್ತಿ ಹಾಗೂ ಹಂಪಿಯ ಕನ್ನಡ ವಿಶ್ವವಿದ್ಯಾಲಯದ 'ನಾಡೋಜ' ಪ್ರಶಸ್ತಿ ಲಭಿಸಿದೆ. ಅಮೇರಿಕಾದ ಪರಿಸರ ಸಂಸ್ಥೆಯೊಂದು ಪರಿಸರ ಶಿಕ್ಷಣ ಸಂಪನ್ಮೂಲಕ್ಕೆ ತಿಮ್ಮಕ್ಕ ಅವರ ಹೆಸರನ್ನಿಟ್ಟಿದೆ. ಅ

# ಮನಸೂರೆಗೊಂಡ ಮಳವಳ್ಳಿ ಮಹದೇವಸ್ವಾಮಿ ಅವರ ಜಾನಪದ ಹಾಡುಗಳು






ದೆಹಲಿ ಕರ್ನಾಟಕ ಸಂಘವು ಅಕ್ಟೋಬರ್ 27ರಂದು ಮಲೆ ಮಾದೇಶ್ವರನ ಖ್ಯಾತಿಯ ರಾಜ್ಯಪ್ರಶಸ್ತಿ ವಿಜೇತ ಮಳವಳ್ಳಿ ಮಹದೇವ ಸ್ವಾಮಿ ಹಾಗೂ ತಂಡದವರಿಂದ ಜಾನಪದ ಹಾಡುಗಳ ಕಾರ್ಯಕ್ರಮವನ್ನು ಆಯೋಜಿಸಿತ್ತು. ಅವರು ಸುಮಾರು ಎರಡೂವರೆ ಘಂಟೆಗಳ ಕಾಲ ಜಾನಪದ ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ತಮ್ಮ ಕಂಠದ ಮೂಲಕ ಮಂತ್ರ ಮುಗ್ಧರನ್ನಾಗಿಸಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಸಂಘದ ಉಪಾಧ್ಯಕ್ಷ ಬಸವರಾಜು ಬಿ.ಕೆ. **ಅವರು** ಮಹದೇವ ಸ್ವಾಮಿಯವರನ್ನು ಅಭಿನಂದಿಸಲಾಯಿತು. ಅ

## ಕನ್ನಡ ಸಂಘ ಸಂಸ್ಥೆಗಳೊಂದಿಗೆ ಸಮಾಲೋಚನೆ

ದೆಹಲಿಯಲ್ಲಿ ಕನ್ನಡಪರ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಹಾಗೂ ಸಂಘದ ಬೆಳವಣಿಗೆಯಲ್ಲಿ ಸದಾ ಹುರುಪಿನಿಂದ ಪಾಲ್ಗೊಳ್ಳುತ್ತಿರುವ ಕನ್ನಡ ಸಂಘ ಸಂಸ್ಥೆಗಳ ಪದಾಧಿಕಾರಿಗಳ ಸಭೆಯನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಅಕ್ಟೋಬರ್ 6 ರಂದು ಕರೆಯಲಾಯಿತು.

ವಿವಿಧ 14 ಸಂಘಗಳಿಂದ ಮೂವತ್ತಕ್ಕಿಂತಲೂ ಹೆಚ್ಚು ಪದಾಧಿಕಾರಿಗಳು ಪಾಲ್ಗೊಂಡ ಸಭೆಯನ್ನು ಉದ್ದೇಶಿಸಿ ಮಾತಾಡುತ್ತಾ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಸಂಘದ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳ ರೂಪರೇಷೆಯನ್ನು ವಿವರಿಸಿದರು. ಮುಂದಿನ ಮಾರ್ಚ್ ವರೆಗಿನ ನಿಗದಿ ಪಡಿಸಿದ ಕಾರ್ಯಕ್ರಮಗಳ ಬಗ್ಗೆ ಎಲ್ಲರ ಅಭಿಪ್ರಾಯ ಹಾಗೂ ಮಾರ್ಗದರ್ಶನ ಪಡೆಯಲಾಯಿತು.




ಸಭೆಯಲ್ಲಿ ಭಾಗವಹಿಸಿದ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು: ಎನ್.ಎ. ಮಾಧವ (ದೆಹಲಿ ಒಕ್ಕಲಿಗ ಗೌಡ ಸಂಘ), ಸಾಯಿ ಪ್ರಸಾದ್, ಸಾಬುದರ್ಗಾ, ಎಸ್.ಕೆ. ರೇಶ್ಮಿ ಮತ್ತು ದಯಾನಂದ್ (ಗುರ್‌ಗಾಂವ್ ಕನ್ನಡ ಸಂಘ), ಉಮೇಶ್ ಭಟ್ ಮತ್ತು ಎಂ.ಎನ್. ಅಶ್ವತ್ಥನಾರಾಯಣ ಶೆಟ್ಟಿ (ರಾಜೇಂದ್ರ ನಗರ ಕನ್ನಡ ಬಳಗ), ಸವಿತಾ ಇನಾಂದಾರ್, ಜಯಶ್ರೀ ಬಸವರಾಜ್ ಮತ್ತು ಡಾ. ಸಾಯಿಪ್ರಶಾಂತಿ ಶೆಟ್ಟಿ (ಜನಕಪುರಿ ಮಹಿಳಾ ಮಂಡಳಿ), ರಾಧಾಕೃಷ್ಣ (ಕರ್ನಾಟಕ ಭವನ), ರಾಜೇಶ್ವರಿ ಕಲ್ಲೂರು ಮತ್ತು ನಾಗವೇಣಿ ಹೆಗಡಿ (ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್), ಚೆನ್ನು ಎಸ್. ಮಠದ ಮತ್ತು ಡಾ. ಎ.ಎಸ್. ಗೊನಾಲ್ (ಕರ್ನಾಟಕ ಜೋಳದ ಬಳಗ), ಕೆ.ಆರ್. ರಾಮಮೂರ್ತಿ (ಸೌತ್ ಕೆನರಾ ಕ್ಲಬ್), ಪ್ರದೀಪ್ ಕುಮಾರ್ ಮತ್ತು ಚಂದ್ರಕಾಂತ (ಅರಾವಳಿ ಕನ್ನಡ ಸಂಘ), ಬಾಲಾಜಿ ನಾಯ್ಕ್, ಬಿ.ಜಿ. ಮತ್ತು ಸಂತೋಷ್ (ಶರಾವತಿ ಕನ್ನಡ ಸಂಘ–ಜೆ.ಎನ್.ಯು), ಸಿ.ಜಿ. ಗುರುರಾಜ (ವಸುಂಧುರಾ ಕನ್ನಡ ಕೂಟ), ಎಚ್.ಜಿ. ಶಿವರಾಮ್ (ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ), ವಿ.ವಿ. ಬಿರಾದಾರ (ಬಸವ ಇಂಟರ್‌ನ್ಯಾಷನಲ್ ಸೆಂಟರ್), ಹಾಗೂ ಆನಂದ್ ಮುರಗೋಡ್ (ಸೋಶಿಯಲ್ ರಿಫೋರ್ಮ್ ಪ್ರೊಗ್ರೆಸ್ಸಿವ್ ಆರ್ಗನೈಸೇಶನ್). ಅ

***ಸವಿತಾ ಇನಾಮದಾರ್***

# ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ

## ಚಿನ್ಮಯ ಬಿ.ಆರ್. ಅವರ ಚಿತ್ರಕಲಾ ಪ್ರದರ್ಶನ

ಕಲಾವಿದ ಚಿನ್ಮಯ ಬಿ.ಆರ್. ಅವರ ಚಿತ್ರಕಲಾ ಪ್ರದರ್ಶನವು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಅಕ್ಟೋಬರ್ 27ರಿಂದ ನವಂಬರ್ 12ರ ವರೆಗೆ ನಡೆಯುತ್ತಿದೆ. ಕಲಾಪ್ರದರ್ಶನವನ್ನು ವಿದ್ವಾಂಸ ಡಾ. ಬಿ.ಎ. ವಿವೇಕ ರೈ ಅವರು ಉದ್ಘಾಟಿಸಿದರು. ಸೃಜನಶೀಲತೆಯ ರೇಖೆಗಳು, ಬಣ್ಣಗಳ ಛಾಯೆ–ಎಲ್ಲಾ ದೃಷ್ಟಿಯಿಂದಲೂ ಚಿನ್ಮಯ ಅವರ ಪೈಂಟಿಂಗ್‌ಗಳು ಇಷ್ಟವಾದವು ಎಂದು ಡಾ. ರೈ ಅವರು ಹೇಳಿದರು.

ಸಾಮಾಜಿಕ ತುಳಿತಗೊಳಪಟ್ಟವರ ಬವಣೆಗಳು, ಸಮಾಜದಲ್ಲಿ ನೊಂದ ವ್ಯಕ್ತಿಗಳು ಅವರ ಚಿತ್ರಕಲೆಯಲ್ಲಿ ವ್ಯಕ್ತವಾಗಿವೆ. ಸಮಕಾಲೀನ ತಲ್ಲಣಗಳನ್ನು ಅವರು ಕುಂಚದ ಮೂಲಕ ಬಿಂಬಿಸುತ್ತಾರೆ.

ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ಚಿತ್ರಕಲೆಯನ್ನು ಅಭ್ಯಸಿಸಿದ ಚಿನ್ಮಯ ಅವರು ವ್ಯಾನ್ ಗಾಗ್‌ನಿಂದ ಪ್ರೇರಿತರಾಗಿ ಆರಂಭದಲ್ಲಿ ವ್ಯಕ್ತಿಚಿತ್ರಗಳನ್ನು ರಚಿಸುತ್ತಿದ್ದರು. ನಂತರ ಅವರು ಆಧುನಿಕೋತ್ತರ ಮತ್ತು ಸಮಕಾಲೀನ ಕಲಾ ಶೈಲಿಗಳನ್ನು ಬೆಂಗಳೂರು ಮತ್ತು ಭೋಪಾಲ್‌ನಲ್ಲಿ ಕಲಿತು ಅವರು ತಮ್ಮ ಕಲಾಕೃತಿಗಳಲ್ಲಿ ಕ್ಯೂಬಿಸಂ ಮತ್ತು ಎಕ್ಸ್‌ಪ್ರೆಷನಿಸಂ ತತ್ವಗಳನ್ನು ಅಳವಡಿಸಿದರು.

ಪ್ರಸ್ತುತ ಅವರು ಗುರ್‌ಗಾಂವ್‌ನಲ್ಲಿ ದಂತವೈದ್ಯಕೀಯ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಅ









## ವಿ.ಟಿ.ಕರೂ ಅವರ ಚಿತ್ರ ಕಲಾ ಪ್ರದರ್ಶನ

ಹಿರಿಯ ಕಲಾವಿದ ವಿಜಯ ಟಿ. ಕರೂ ಅವರ ಚಿತ್ರ ಕಲಾಪ್ರದರ್ಶನವು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಅಕ್ಟೋಬರ್ 19ರಿಂದ 26ರ ವರೆಗೆ ನಡೆಯಿತು.

ಕೇಂದ್ರ ಕೃಷಿ ಇಲಾಖೆಯಲ್ಲಿ ಹಿರಿಯ ಕಲಾವಿದರಾಗಿರುವ ಕರೂ ಅವರು ನಾಗಪುರ್ ವಿಶ್ವವಿದ್ಯಾಲಯದಿಂದ ಕಲಾ ಪದವಿಯನ್ನು ಪಡೆದಿದ್ದು, ಅವರು ದೇಶದ ವಿವಿದೆಡೆ ಕಲಾಪ್ರದರ್ಶನಗಳನ್ನು ನಡೆಸಿದ್ದಾರೆ. ಅ

ಲೇಖನ

# ಕನ್ನಡದ ಅನನ್ಯತೆ

ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಅಭಿಮತಕ್ಕಾಗಿ ವಿಶೇಷ ಲೇಖನವನ್ನು **ಎಂ.ಎಸ್. ಲಾವಣ್ಯ ಬಸವರಾಜ್** ಅವರು ಬರೆದಿದ್ದಾರೆ.

ಕನ್ನಡವನ್ನು ರಕ್ಷಿಸು ಕನ್ನಡಿಗರಿಂದ ಹೀಗೆಂದು ಎಂದೋ ನೊಂದು ನುಡಿದವರು ಮಾಸ್ಟರ್ ಹಿರಣ್ಣಯ್ಯನವರು. ಈಗಿನ ಎಲ್ಲಾ ಅನ್ಯಾಯ ಮತ್ತು ಶೋಷಣೆಗೆ ನಮ್ಮ ಮೃದು ಧೋರಣೆಯೇ ಕಾರಣ. ಅನ್ಯರ ದಬ್ಬಾಳಿಕೆ ಮತ್ತು ಷಡ್ಯಂತ್ರಗಳಿಗೆ ಬಲಿಯಾಗಿ ಪ್ರಸ್ತುತ ಸ್ಥಿತಿಯನ್ನು ತಂದುಕೊಳ್ಳಲಾಗಿದೆ. ಈ ರಾಜ್ಯ ಕಳೆದುಕೊಂಡಷ್ಟು ನೆಲವನ್ನು ಮತ್ತ್ಯಾವ ರಾಜ್ಯವೂ ಕಳೆದುಕೊಂಡಿಲ್ಲ. ಜಲ ಸಂಪತ್ತಿನಲ್ಲಿ ನಾವು ವಂಚಿತರಾಗಿದ್ದೇವೆ. ಉದ್ಯೋಗಾವಕಾಶಗಳು ಕೈ ತಪ್ಪಿವೆ. ನಮ್ಮ ಭಾಷೆಯ ಮೇಲೆ ದಬ್ಬಾಳಿಕೆ ನಡೆದಿದೆ. ಹೀಗೆ ನಾನಾ ರೀತಿಯಲ್ಲಿ ಕನ್ನಡಿಗರು ಶೋಷಣೆಗೆ ಒಳಗಾಗಿದ್ದಾರೆ. ಇದರ ಜೊತೆಗೆ ಭಾಷೆ ಯಾವುದಾದರೇನು? ಬೆಳಗಾಂ ಎಲ್ಲಿದ್ದರೇನು? ಕಾಸರಗೋಡು ಎಲ್ಲಿದ್ದರೇನು? ಎಂದು ಹೇಳುವ ನಮ್ಮ ಕನ್ನಡಿಗರು ಹಲವರು ಇದ್ದಾರೆ. ಕೈಬಿಟ್ಟು ಹೋದ ಅಚ್ಚ ಕನ್ನಡ ಪ್ರದೇಶಗಳಲ್ಲಿ ಇಂದು ನಮ್ಮ ಕನ್ನಡದ ಮಕ್ಕಳು ಮಲಯಾಳಂ, ಮರಾಠಿ ಮತ್ತು ತಮಿಳು ಮುಂತಾದ ಅನ್ಯಭಾಷೆಗಳನ್ನು ಕಲಿಯುತ್ತಿದ್ದಾರೆ.

ತಮ್ಮ ಮಾತೃಭಾಷೆ ಇದ್ದು ಬೇರೊಂದು ಭಾಷೆಯನ್ನು ಕಲಿಯಬೇಕಾಗಿರುವುದು ಯಾರದೋ ತಪ್ಪಿಗೆ, ದೌರ್ಬಲ್ಯಕ್ಕೆ ಈ ಕನ್ನಡದ ಕಂದಮ್ಮಗಳು ಬಲಿಪಶುವಾಗಿವೆ. ಈ ಸ್ಥಿತಿ ತಲುಪಿರುವುದು ಶೋಚನೀಯ, ಯೋಚನೀಯ, ಕನ್ನಡ ಪ್ರದೇಶಗಳು ವಿವಿಧ ಕಾಲ ಘಟ್ಟಗಳಲ್ಲಿ ಸಣ್ಣಪುಟ್ಟ ಪ್ರಾಂತ್ಯಗಳಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು ಸೇರಿ ಹೋಗಿದ್ದವು. ತೆಲುಗು, ಮರಾಠಿ, ಮಲೆಯಾಳಿ, ತಮಿಳು, ಕೊಂಕಣಿ, ತುಳು ಹೀಗೆ ಭಿನ್ನ ಭಿನ್ನ ಭಾಷಾ ವಲಯಗಳು ನಿರ್ಮಾಣಗೊಂಡಿದ್ದವು.

ಪ್ರಸ್ತುತ ಕನ್ನಡಕ್ಕೆ ಒದಗಿ ಬಂದಿರುವುದು ಕನ್ನಡಿಗರ ದಿವ್ಯ ನಿರ್ಲಕ್ಷತೆಯಿಂದಲೆ ಎಂಬುದು ಸ್ಪಷ್ಟವಾದುದು. ಭಾಷೆಯ ವಿಚಾರದಲ್ಲಿ ಕನ್ನಡಿಗರು ಬೇಗ ಸ್ಪಂದಿಸುವ ಸೂಕ್ಷ್ಮ ಸಂವೇದಿಗಳಲ್ಲ. ಸೊರಗುತ್ತಿರುವ ಕನ್ನಡಕ್ಕೆ ನೀರೆರೆಯುವ ಕಾರ್ಯ ಇಂದಿಗೂ ಸಮಷ್ಠ ದೃಷ್ಟಿಯಿಂದ ಆಪ್ತವಾಗಿ ನಡೆಯುತ್ತಿಲ್ಲ. ಬೆಂಗಳೂರಿನಲ್ಲಿದ್ದು ನಿಮಗೆ ತಮಿಳು ಬರುವುದಿಲ್ಲವೆ ಎಂಬ ತಮಿಳರ ಮೂದಲಿಕೆಗೆ ಒಳಗಾಗಿರುವುದು, ವಿವಿದೆಡೆ ಕನ್ನಡಿಗರು ಲಾಭಕ್ಕಾಗಿ ತಮ್ಮ ಆಸ್ತಿಪಾಸ್ತಿಗಳನ್ನು ಅನ್ಯಭಾಷಿಕರಿಗೆ ಮಾರಿ ಅವರಡಿಯಲ್ಲೇ ಜೀತದಾಳುಗಳಾಗಿರುವ ಮಾಹಿತಿಗಳಿವೆ.

ಹಸನು ಮಾಡಿದ ಹೊಲದಿ ಕಸವ ಬೆಳೆಸುವರಿಲ್ಲಿ
ಹೆರರ ದನಗಳಿಗೆಂದು ಹುಲ್ಲು ಬೆಳೆಸುವರಿಲ್ಲಿ
ಕನ್ನಡದ ಜನಪದಕ್ಕೆ ಅನ್ನ ಸಿಗದಿರುವಾಗ
ಅನ್ಯನಾಡಿನ ಜನಕ್ಕೆ ಕಳುಹಿಸುವರಿಲ್ಲ

ಎಂಬ ಕವಿತಾಚರಣವನ್ನು ಸಿದ್ದಯ್ಯ ಪುರಾಣಿಕರು ಕನ್ನಡಿಗರ ಮನೋಧರ್ಮವನ್ನರಿತು ರಚಿಸಿರುವರು. ಜಾಗತೀಕರಣ, ಗಣಕೀಕರಣ, ವಿಜ್ಞಾನ–ತಂತ್ರಜ್ಞಾನಗಳ ಈ ಕಾಲದಲ್ಲಿ ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಅದರ ಎಲ್ಲ ಶಕ್ತಿ ಸಾಮರ್ಥ್ಯಗಳೊಂದಿಗೆ ಉಳಿಸಿ ಬೆಳೆಸಿ ಜಾಗತಿಕ ಮಟ್ಟದಲ್ಲಿ ಕಲಿಸುವ ಹುಮ್ಮಸ್ಸು ವೃದ್ಧಿಯಾಗಬೇಕು. 'ಸುಲಿದ ಬಾಳೆಯ ಹಣ್ಣಿನಂದದಿ' ಎಂದೆನಿಸಿಕೊಂಡ ಕನ್ನಡವನ್ನು ಅಲಕ್ಷಿಸುವುದು ಸರಿಯಲ್ಲ. 1828ರಲ್ಲಿ ಜಾನ್‌ಮೆಕರಲ್ ಹೇಳಿರುವ ಮಾತನ್ನು ಇಲ್ಲಿ ನೆನೆಯಬಹುದು. "ದಕ್ಷಿಣಭಾರತದ ಎಲ್ಲಾ ಭಾಷೆಗಳಲ್ಲಿ ಅಭಿವ್ಯಕ್ತಿ ಮಾಡತಕ್ಕ ಪ್ರಬಲವಾದ ಭಾಷೆ ಎಂದರೆ ಕನ್ನಡ ಮೊದಲನೆಯದು."

ಗಾಂಧೀಜಿಯವರು ಯಾವಾಗಲೂ ಎಲ್ಲರಿಗೂ ಹೇಳುತ್ತಿದ್ದ ಮಾತಿದು.



ನಿಮ್ಮ ದೇಶಭಾಷೆಯನ್ನು ರಕ್ಷಿಸಿಕೊಳ್ಳಿ. ಅವರು ಇಂಗ್ಲಿಷನ್ನು ಕಲಿತಿದ್ದರು. ತಮ್ಮ ಮಾತೃಭಾಷೆ ಗುಜರಾತಿಯಲ್ಲೇ ತಿಳಿಸುತ್ತಿದ್ದರು. ಬೇರೆ ಭಾಷೆಗಳು ನಮ್ಮ ಅಂತರಂಗದ ಭಾಷೆಗಳಾಗಲು ಸಾಧ್ಯವಿಲ್ಲ . ಆತ್ಮೀಯ ಸಂಗತಿಗಳನ್ನು, ಖಾಸಗಿ ವಿಚಾರಗಳನ್ನು ಸಂವಹಿಸಲು ಸಾಧ್ಯವಿಲ್ಲ.

ಭಾರತದಲ್ಲಿ ಕಡಿಮೆ ಭಾಷಾ ಪ್ರೇಮವಿರುವ ರಾಜ್ಯವೆಂದರೆ ಕರ್ನಾಟಕವೆಂದೇ ಹೇಳಬಹುದು. ಕನ್ನಡಿಗರು ತಮ್ಮ ಮಾತೃಭಾಷೆಯನ್ನು ಉಳಿಸಿ ಬೆಳೆಸಿ ಬಳಸಿ ಕನ್ನಡದಲ್ಲಿ ಮಾತನಾಡಿ, ಕನ್ನಡದಲ್ಲಿ ಬರೆಯಿರಿ ಎಂದು ಜಾಹೀರಾತಿಯೋಪಾದಿಯಲ್ಲಿ ಹೇಳುವಂತಾಗಿರುವುದು ನಮ್ಮ ದೌರ್ಬಲ್ಯದ ಸಂಕೇತವಾಗಿದೆ.

ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ
ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ
ಎಂದು ಕುವೆಂಪು ಬಹಳ ಹಿಂದೆಯೇ ಎಚ್ಚರಿಸಿದ್ದಾರೆ.

ಕನ್ನಡಿಗರು ಅನ್ಯಭಾಷಿಕರೊಡನೆ ಅವರ ಭಾಷೆ ಕಲಿತು ಅವರೊಡನೆ ಮಾತನಾಡುವರು. ಕನ್ನಡವನ್ನು ಕಡೆಗಣಿಸಿದರೆ ನಾವು ದುರ್ಬಲರಾಗುತ್ತೇವೆ ಎಂಬುದನ್ನು ಮರೆತಿದ್ದೇವೆ. ಕನ್ನಡ ಶಾಲೆಗಳು ಕಡಿಮೆಯಾಗಿ ಕ್ರಮೇಣ ಕನ್ನಡಿಗರನ್ನು ಹುಡುಕಬೇಕಾಗುತ್ತದೆ. ಕನ್ನಡಿಗರಲ್ಲಿ ಭಾಷಾಪ್ರೇಮ ಕಡಿಮೆ. ಖ್ಯಾತ ಬರಹಗಾರ್ತಿ ಸುಧಾಮೂರ್ತಿಯವರು ಹೀಗೆ ಹೇಳಿದ್ದಾರೆ. "ಅತಿ ಉನ್ನತ ಪದವಿಯಲ್ಲಿರುವ ಬಂಗಾಲಿಗಳು, ಮರಾಠಿಗರೂ, ತಮಿಳರೂ ಒಂದಕ್ಷರವೂ ಬೇರೆ ಭಾಷೆಯನ್ನು ಬೆರೆಸದೆ ತಮ್ಮ ಶುದ್ಧವಾದ ಭಾಷೆಯನ್ನು ಕಾಪಾಡಿಕೊಂಡಿದ್ದಾರೆ. ನಮ್ಮ ದೇಶದಲ್ಲಿ ಮಾತ್ರವಲ್ಲ, ವಿದೇಶದಲ್ಲೂ ನೋಡಿದ್ದೇನೆ. ಅವರು ಭಾಷೆಯನ್ನು ಸಶಕ್ತ ಮಾಧ್ಯಮವನ್ನಾಗಿಸಿಕೊಂಡಿದ್ದಾರೆ".

ಇಲ್ಲಿ ನಮ್ಮ ಕೆಲವು ಕನ್ನಡಿಗರಿಗೆ ಸಾಮಾನ್ಯ ಕನ್ನಡ ಶಬ್ದಗಳೇ ಗೊತ್ತಿರುವುದಿಲ್ಲ. ಸಂವೇದನೆ, ಸಂಕೀರ್ಣ, ಕ್ರಿಯಾಶೀಲತೆ ಇಂತಹ ಪದಗಳ ಪರಿಚಯವೇ ಇರುವುದಿಲ್ಲ. ಕನ್ನಡ ನಿಘಂಟು ತೆಗೆದು ನೋಡುವ ಅಭ್ಯಾಸವಿರುವುದಿಲ್ಲ. ಕಾರಣ ಸಮೃದ್ಧವಾಗಿ ಆಂಗ್ಲ ಪದಗಳು ಸಿಗುವುದರಿಂದ ವಾಕ್ಯದಲ್ಲಿ ಎರಡು ಆಂಗ್ಲಪದಗಳನ್ನು ಬಳಸಿ ಮಾತನಾಡುವುದು ಎಲ್ಲೆಲ್ಲೂ ಕಾಣುತ್ತೇವೆ.



ದೂರದರ್ಶನದಲ್ಲಿ ಮಹಿಳೆಯರು ಹೆಚ್ಚು ಆಂಗ್ಲ ಪದಗಳನ್ನು ಬಳಸುತ್ತಾರೆ. ಹೀಗಾಗಿ ಅನೇಕ ಸುಂದರವಾದ ಕನ್ನಡ ಶಬ್ದಗಳು ನಿಘಂಟಿನಲ್ಲೇ ಉಳಿದು ತುಕ್ಕು ಹಿಡಿದಂತಾಗಿವೆ. ಇನ್ನೂ ಕೆಲವರು ಸ್ವಲ್ಪ ಕಠಿಣವಾದ ಕನ್ನಡಪದ ಕಂಡು ಬಂದರೆ ಭಾಷೆ ಸರಳವಾಗಿರಬೇಕು ಎಂಬ ಧೋರಣೆಯಿಂದ ಆ ಪದಗಳು ಬಳಕೆಗೆ ಬಾರದಂತೆ ಮಾಡುವರು. ಭಾಷೆ ಸವಕಲು ನಾಣ್ಯವಾಗಬಾರದು. ಚಾಲನೆಯಲ್ಲಿರಬೇಕು. ಕನ್ನಡವನ್ನು ಇತರೆ ಭಾಷೆಗಳಿಗಿಂತಲೂ ಕಡಿಮೆ ಇಲ್ಲ ಎಂಬುದನ್ನು ತೋರಿಸಿಕೊಡಬೇಕು.

ಭಾಷೆ ಒಂದು ಸಂಪರ್ಕಸಾಧನ, ವಿಕಾಸದ ಅಭಿವ್ಯಕ್ತಿ, ಹಳೆಯ ಶಬ್ದಗಳಿಗೆ ಹೊಸ ಅರ್ಥ ನೀಡುವ ಶಕ್ತಿ. ಭಾಷೆ ಬಳಕೆಯಿಂದ ಮಾತ್ರ ಬೆಳೆಯುತ್ತದೆ ಮತ್ತು ನಾವು ಬೆಳೆಯುತ್ತೇವೆ. ತಮ್ಮ ಭಾಷೆಯನ್ನು ಮರೆತರೆ ಇಡೀ ಸಂಸ್ಕೃತಿ ದೂರ ಸರಿಯುವುದು. ಅಧ್ಯಯನಶೀಲತೆಯಿಂದ ಸಂವಹನದಿಂದ ಮತ್ತು ಬರವಣಿಗೆಯಿಂದ ಭಾಷಾ ಪ್ರಗತಿ ಸಾಧ್ಯ. ಭಾಷೆ ಮಾನವನ ಭಾವನೆಗಳ ಸಂವಹನ ಮಾಧ್ಯಮ, ಅಭಿವ್ಯಕ್ತಿಯವಾಹಕ. ನಾವು ನಮ್ಮ ಭಾಷೆಯಲ್ಲಿ ಶ್ರೀಮಂತವಾಗಿರಬೇಕು. ಕುವೆಂಪು ತಮ್ಮ ಅಧ್ಯಯನದಿಂದಲೆ ಭಾಷೆಯನ್ನು ಸಾಧಿಸಿಕೊಂಡರು. ಸಾಹಿತ್ಯ ಅನುಭವದಿಂದ ಮೂಡಬೇಕು.

ಭಾಷಾ ಮಿಶ್ರಣ ಅಥವಾ ನುಡಿಬೆರಕೆ ಭಾಷಾ ಸೊಗಸನ್ನು ಹಾಳು ಮಾಡುತ್ತದೆ. ಭಾಷಾ ಸೌಂದರ್ಯವನ್ನು ವಿಕೃತಗೊಳಿಸುತ್ತದೆ. ಅನಿವಾರ್ಯತೆ ಕಂಡು ಬಂದರೆ ಕಠಿಣ ಆಂಗ್ಲಪದ ಬಳಸಿ ಇಲ್ಲವಾದರೆ ವಾಕ್ಯವನ್ನು ಪೂರ್ಣವಾಗಿ ಒಂದೇ ಭಾಷೆಯಲ್ಲಿ ಪೂರ್ಣಗೊಳಿಸಿ. ಆಂಗ್ಲಾನುಕರಣೆ ಬೇಡ, ಅವಶ್ಯಕತೆಗೆ ತಕ್ಕಂತೆ ಕಲಿತರೆ ಸಾಕು. ಭಾಷಾ ಕೌಶಲ್ಯ ಮತ್ತು ಸಂವಹಣ ಕೌಶಲ್ಯಬೇಕು. ಇವುಗಳಿಂದಲೆ ಭಾಷಾ ಪ್ರಬುದ್ಧತೆ ಉಂಟಾಗುವುದು. ಕರಾವಳಿ ಪ್ರದೇಶದ ಜನರು, ಉತ್ತರ ಕರ್ನಾಟಕದದವರು ಮತ್ತು ಇನ್ನೂ ಕೆಲವು ಪ್ರದೇಶದ ಜನರು ಪೂರ್ಣವಾಗಿ ಶುದ್ಧ ಕನ್ನಡದಲ್ಲೇ ಮಾತನಾಡಿ ಗುರುತಿಸಿಕೊಳ್ಳುವರು.

ಕನ್ನಡಿಗರು ಅನ್ಯಭಾಷಿಕರು ಕನ್ನಡ ಕಲಿಯಲು ಬಿಡುವುದಿಲ್ಲ. ಒಮ್ಮೆ ದೆಹಲಿಯಲ್ಲಿ ಬೆಂಗಳೂರಿನಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿರುವ ದಂಪತಿಗಳು ಭೇಟಿಯಾಗಿದ್ದರು. "ನೀವು ಬೆಂಗಳೂರಲ್ಲಿ ಇಷ್ಟು ವರ್ಷವಿದ್ದರೂ ಸಹ ಕನ್ನಡ ಕಲಿತಿಲ್ಲವೇಕೆ?" ಎಂದು ಕೇಳಿದೆವು. ಅದಕ್ಕೆ ಅವರು ಕೊಟ್ಟ ಉತ್ತರ ಇದು. "ನಮಗೆ ಕನ್ನಡ ಕಲಿಯಬೇಕೆಂಬ ಆಸೆ ಇದೆ. ಆದರೆ ನಾವು ಎಲ್ಲೇ ಹೋಗಲಿ ಕನ್ನಡಿಗರು ನಮ್ಮನ್ನು ಹಿಂದಿಯಲ್ಲೇ ಮಾತನಾಡಿಸುತ್ತಾರೆ. ನಾವು ಕನ್ನಡವನ್ನು ಹೇಗೆ ಕಲಿಯುವುದು ಎಂಬ ತಮ್ಮ ಅಸಹಾಯಕತೆಯನ್ನು ಹೇಳಿಕೊಂಡರು. ಎಲ್ಲೂ ಇಲ್ಲದೆ ಆಂಗ್ಲ ವ್ಯಾಮೋಹ ಈ ರಾಜ್ಯದ ಕನ್ನಡಗರಿಗೆ ಏಕೆ? ಆಂಗ್ಲಭಾಷೆಯನ್ನು ನಮ್ಮ ಅವಶ್ಯಕತೆಗೆ ತಕ್ಕಂತೆ ಕಲಿತರೆ ಸಾಕು. ಬ್ರಿಟಿಷರ ಕಾಲದಲ್ಲಿ ಅವರು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮತ್ತು ಪ್ರಮುಖ ಭಾರತೀಯ ಭಾಷೆಗಳಲ್ಲಿ ಕನ್ನಡವೂ ಒಂದು ಪ್ರಬುದ್ಧ ಭಾಷೆ ಎಂದು ತೋರಿಸಿದ್ದಾರೆ. ಅವರು ಈ ದೇಶವನ್ನು ಆಳುತ್ತಿದ್ದಾಗ ಬ್ರಿಟಿಷ್ ನ್ಯಾಯಾಧೀಶರು ನ್ಯಾಯಪೀಠಗಳನ್ನು ಅಲಂಕರಿಸಿದ್ದ ಕಾಲದಲ್ಲಿ ನ್ಯಾಯಾಲಯದ ಕಲಾಪಗಳು ಕನ್ನಡದಲ್ಲೇ ನಡೆಯುತ್ತಿದ್ದವು. ಆಗ ಭಾಷೆಯ ಪ್ರಶ್ನೆ ಎದುರಾಗಲಿಲ್ಲ. ನ್ಯಾಯಾಲಯದ ವ್ಯವಹಾರವನ್ನು ಜನ ಅರ್ಥಮಾಡಿಕೊಳ್ಳುತ್ತಿದ್ದರು. ಕನ್ನಡ ಅತ್ಯಂತ ಸುಂದರವಾದ ಲಿಪಿಗಳನ್ನು ಹೊಂದಿರುವ ಭಾವನೆಗಳನ್ನು ವೃದ್ಧಿಸುವ ಪ್ರಾಚೀನ ಭಾಷೆ.

ಅಂದಿನ ಮದ್ರಾಸ್ ರಾಜ್ಯದಲ್ಲಿ ಎಂ.ಜಿ. ರಾಮಚಂದ್ರನ್ ಮುಖ್ಯಮಂತ್ರಿಗಳಾಗಿದ್ದಾಗ ಎಲ್ಲಾ ಟಿಪ್ಪಣಿಗಳು ತಮಿಳಿನಲ್ಲೇ ಇರಬೇಕು ಎಂಬ ಸುತ್ತೋಲೆಯನ್ನು ಕಳುಹಿಸಿದರು. ಒಮ್ಮೆ ಹೀಗೆ ನಡೆಯಿತು. ಮೂರು ಬಾರಿಯೂ ಆಂಗ್ಲ ಭಾಷೆಯಲ್ಲೇ ಬಂತು. ಆಗ ನಿರ್ದಾಕ್ಷಿಣ್ಯವಾಗಿ ಅಂದಿನ ಮುಖ್ಯ ಕಾರ್ಯದರ್ಶಿಗಳಾಗಿದ್ದ ಕಾರ್ತಿಕೇಯನ್ ಅವರನ್ನು ಅಧಿಕಾರದಿಂದ ಕೆಳಗಿಳಿಸಿದರು. ಹೀಗೆ ಆ ರಾಜ್ಯದವರು ಬಿಗಿಯಾಗಿ ಇರುವುದರಿಂದ ತಮಿಳು ಬೆಳೆಯಿತು. ಅದೇ ಪರಂಪರೆ ಮುಂದುವರೆದಿದೆ. ಇಂದು ತಮಿಳುನಾಡಿನಲ್ಲಿ ಆಂಗ್ಲ ಅಥವಾ ಬೇರೆ ಯಾವುದೇ ಭಾಷೆಯ ಸಾಹಿತ್ಯವಾಗಲಿ ಅಥವಾ ಏನೇ ಬರಹವಾಗಲಿ ತ್ವರಿತವಾಗಿ ತಮಿಳು ಭಾಷೆಗೆ ಅನುವಾದಗೊಳ್ಳುವ ಶೀಘ್ರ ವ್ಯವಸ್ಥೆ ಇದೆ.

ಕರ್ನಾಟಕದಲ್ಲಿ ಕನ್ನಡಿಗರ ಸರ್ಕಾರವೇ ಇದ್ದರೂ ಕಾನ್ವೆಂಟ್ ಶಾಲೆಗಳು ಬೆಳೆಯುತ್ತವೆ. ಕನ್ನಡಿಗರಿಂದಲೇ ಸ್ಥಾಪಿತವಾದ ಕಾನ್ವೆಂಟ್ ಶಾಲೆಗಳಲ್ಲಿ ಕನ್ನಡದ ಸ್ಥಿತಿ ಎಲ್ಲರಿಗೂ ತಿಳಿದದ್ದೆ. ಹಳ್ಳಿಹಳ್ಳಿಗಳಲ್ಲೂ ಕಾನ್ವೆಂಟ್ ಶಾಲೆಗಳನ್ನು ತೆರೆದು ಆಂಗ್ಲ ಭಾಷೆಯ ಕಲಿಕೆಗೆ ಶ್ರಮಿಸಿ ಕನ್ನಡದ ಬಗ್ಗೆ ಕೀಳರಿಮೆ ತೋರುವರು. ಕೆಲವು ಹಳ್ಳಿಗಳಲ್ಲಿ ನಮ್ಮ ಊರಲ್ಲಿ ಕಾನ್ವೆಂಟ್ ಶಾಲೆ ಇಲ್ಲ ಎಂದು ಪಟ್ಟಣಕ್ಕೆ ವಲಸೆ ಬಂದಿರುವ ಮಾಹಿತಿಗಳಿವೆ. ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ಸೌಲಭ್ಯಗಳಿದ್ದು ನುರಿತ ಭೋದಕವರ್ಗವಿದ್ದಾಗ್ಯೂ ಸಹ ಪಾಲಕರು, ಪೋಷಕರು ತಮ್ಮ ಮಕ್ಕಳನ್ನು ಸೇರಿಸುತ್ತಿಲ್ಲ. ಕನ್ನಡಿಗರು ಎಲ್ಲಾ ರೀತಿಯಲ್ಲೂ ವಂಚಿತರಾಗಿದ್ದಾರೆ. ರೈಲ್ವೇ ಇಲಾಖೆಯಲ್ಲಿ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯಗೊತ್ತಿರುವ ಸಂಗತಿ ಈ ನಿಟ್ಟಿನಲ್ಲಿ ಬಿಹಾರಿಯವರು ವ್ಯವಸ್ಥಿತವಾಗಿ ಸಂಘ–ಸಂಸ್ಥೆಗಳನ್ನು ಕಟ್ಟಿಕೊಂಡು ಹೋರಾಡುವರು. ಕನ್ನಡ ಜನವಲ್ಲದೆ ಕನ್ನಡವನ್ನು ಉಳಿಸುವ ರಾರ್‍ಯ, ಬಳಸುವರೂ ಕಾವಾರಿಹರ್‍ಯ ಎಂದು ಪುತಿನರವರು ನೀಡಿರುವ ಸಂದೇಶವನ್ನು ನೆನೆಯಬೇಕು.

ನಾವು ನಮ್ಮ ಭಾಷೆಯ ಹಿರಿಮೆಗರಿಮೆಯನ್ನು ಸರಿಯಾಗಿ ತಿಳಿಯುವ ಪ್ರಯತ್ನ ಮಾಡುತ್ತಿಲ್ಲ. ನಮ್ಮದು ಶ್ರೀಮಂತ ಭಾಷೆ ಹದಿನಾರು ಶತಮಾನಗಳ ಮೊದಲೇ ಕನ್ನಡದಲ್ಲಿ ಕಾವ್ಯ ಸೃಷ್ಟಿಯಾಗಿರುವುದು ತಿಳಿದುಬಂದಿದೆ. ಸಾಹಿತ್ಯಲೋಕಕ್ಕೆ ಗಣನೀಯ ಕೊಡುಗೆ ನೀಡಿದ ಕನ್ನಡ ಜಗತ್ತಿನ ಸಮೃದ್ಧ ಭಾಷೆಯಾಗಿದೆ.

ಹಳೆಗನ್ನಡದಲ್ಲಿ 22 ಮಹಾಕಾವ್ಯಗಳಿದ್ದು, 4500 ಯಕ್ಷಗಾನ ಪ್ರಸಂಗಗಳಿವೆ. 10ಲಕ್ಷ ಪದ್ಯಗಳಿವೆ. ಹೊಸಗನ್ನಡದಲ್ಲಿಯೂ 60 ಮಹಾ ಕಾವ್ಯಗಳಿವೆ. ಜಗತ್ತಿನಲ್ಲಿ ಇಷ್ಟೊಂದು ಸಾಹಿತ್ಯ ಸಂಪತ್ತನ್ನು ಹೊಂದಿದ ಭಾಷೆ ಇನ್ನೊಂದಿಲ್ಲ ಎಂದು ಸುಪ್ರಸಿದ್ಧ ಸಾಹಿತಿ ದೇಜಗೌರವರು ತಿಳಿಸಿರುವರು.

ಎಲ್ಲಾ ಹಂತಗಳಲ್ಲೂ ಕನ್ನಡ ಅಧಿಕೃತ ಭಾಷೆಯಾಗಬೇಕು. ಸಶಕ್ತ ಮಾಧ್ಯಮವನ್ನಾಗಿಸಲು ಸಮಸ್ತ ಕನ್ನಡಿಗರು ಹೋರಾಡಿದಾಗಲೇ ಪ್ರಗತಿ ಸಾಧ್ಯ. ಕನ್ನಡಿಗರ ಏಳಿಗೆ ಕನ್ನಡಿಗರಿಂದಲೇ ಆಗಬೇಕು. ಕನ್ನಡದಲ್ಲಿ ಮಾತನಾಡಿ, ಕನ್ನಡದಲ್ಲಿ ಸಹಿ ಮಾಡಿ, ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿ, ನಿತ್ಯವೂ ಕನ್ನಡ ವೃತ್ತ ಪತ್ರಿಕೆಗಳನ್ನು ತರಿಸಿ, ಅಪ್ಪ ಅಮ್ಮ ಎಂದು ಕನ್ನಡದಲ್ಲಿ ಕರೆಯಿರಿ, ಕನ್ನಡದ ಅನನ್ಯತೆಯನ್ನು ಉಳಿಸಲು ಸಮಷ್ಠಿ ದೃಷ್ಟಿಯಿಂದ ಶ್ರಮಿಸೋಣ. ಅ

***ಎಂ.ಎಸ್. ಲಾವಣ್ಯ ಬಸವರಾಜ್***

ಅಭಿವೃದ್ಧಿಯ ಹೆಸರಿನಲ್ಲಿ ನಾಶವಾಗುವ ಪರಿಸರದಲ್ಲಿ ಸಾಮಾನ್ಯ ಹಕ್ಕಿಗಳೂ ಕೂಡಾ ಅಸಾಹಯಕರಾಗುವ ಚಿತ್ರಣವನ್ನು **ಡಾ. ಅಹಲ್ಯಾಚಿಂತಾಮಣಿ**ಯವರು ಭಾವನೆಯ ಬಳ್ಳಿಯ ಈ ಬರಹದ ಮೂಲಕ ಹಂಚಿಕೊಂಡಿದ್ದಾರೆ.

# ಅಬ್ಬಾ ನಾನೇನಾದರೂ ಹಕ್ಕಿ ಆಗಿದ್ದಿದ್ದರೆ....

ನಾನು 65 ವರ್ಷಗಳ ಹಿಂದೆ ಪಕ್ಷಿಗಳನ್ನು ನೋಡಿದಾಗೆಲ್ಲಾ ಆಹಾ! ಎಷ್ಟು ಚೆನ್ನ "ಹಕ್ಕಿ ಹಾರುತಿದೆ ನೋಡಿದಿರಾ" ಎಂಬ ಪದ್ಯದ ಸಾಲುಗಳನ್ನು ಹೇಳಿಕೊಳ್ಳುತ್ತಿದ್ದೆ. ನಾನೂ ಹಕ್ಕಿ ಆಗಿದ್ದರೆ ಎಷ್ಟು ಸ್ವಚ್ಛಂದವಾಗಿ ಯಾರ ಅಂಕೆಯೂ ಇಲ್ಲದೆ ಹಾರಾಡಿಕೊಂಡು ಎಲ್ಲಿಗೆ ಹೋಗಬೇಕಾದರೂ ಯಾರದೇ ಅಪ್ಪಣೆ ಇಲ್ಲದೆ ಮನಸ್ಸು ಬಂದ ಕಡೆಯೆಲ್ಲಾ ವಿಹರಿಸಬಹುದು. ಪ್ರಪಂಚದ ನಾನಾ ಭಾಗಗಳನ್ನು ಉಚಿತವಾಗಿ ನೋಡುತ್ತಾ ಹೊಸ ಹೊಸ ಹಕ್ಕಿಗಳನ್ನು ಪರಿಚಯ ಮಾಡಿಕೊಳ್ಳಬಹುದಲ್ಲಾ ಎಂದು ಅನೇಕ ಬಾರಿ ಅಂದುಕೊಳ್ಳುತ್ತಿದ್ದೆ.



ಆ ಪರಮಾತ್ಮನನ್ನು "ನಾನು ನಿಜವಾಗಿಯೂ ನಿನ್ನನ್ನು ನನ್ನ ಅಮ್ಮ ಅಪ್ಪನ ಆದೇಶದಂತೆ ಪ್ರಾರ್ಥಿಸುತ್ತಿದ್ದೇನೆ. ನಾನು ಏನು ತಪ್ಪು ಮಾಡಿದ್ದರೂ ಕ್ಷಮಿಸಿ ನಿನ್ನ ಅಭಯ ಹಸ್ತದಿಂದ ಆಶೀರ್ವದಿಸಿ ನನ್ನನ್ನು ಒಂದು ಹಕ್ಕಿಯನ್ನಾಗಿ ಮಾಡಪ್ಪಾ" ಎಂದು ದಿನ ನಿತ್ಯ ಒಂದು ಸಾರಿ ದೇವರಿಗೆ ನಮಸ್ಕರಿಸುತ್ತಿದ್ದೆ. ಅಲ್ಲದೇ ದೇವರ ಮೇಲೇ ಭಾರ ಹಾಕಿ ಬಿಟ್ಟು ಸುಮ್ಮನೆ ಕುಳಿತುಬಿಡಬಾರದು ಎಂದು ನಾವಿದ್ದ ಹಳ್ಳಿ ಮನೆಯ ಹೊರ ಜಗಲಿಯಲ್ಲಿ ನಿಂತು ಎರಡು ಕೈಗಳನ್ನೂ ಎಡ ಬಲಗಳಲ್ಲಿ ನೇರವಾಗಿ ಚಾಚಿ, ಎರಡು ಕಾಲು ಎತ್ತಿ ಹಾರಲು ಹೋಗಿ ಡಂ ಎಂದು ಬಿದ್ದು ಪೆಟ್ಟು ಮಾಡಿಕೊಂಡಿದ್ದೆ. ನನ್ನಮ್ಮನ ಕೈಲಿ ಬೈಯಿಸಿಕೊಂಡು ಹೊಡೆಸಿಕೊಂಡು ಅತ್ತು ದುಃಖಪಟ್ಟಿದ್ದೂ ಆಗಿತ್ತು.

ಆದರೆ ಸದ್ಯ ಈಗ ಈ ಶತಮಾನದಲ್ಲಿ ನಾನು ಮನುಷ್ಯಳಾಗಿಯೇ ಇದ್ದು ಬದುಕಿದ್ದೇನಲ್ಲ ಸದ್ಯ ಎಂದು ಸಂತೋಷಪಡುತ್ತೇನೆ. ಅಂತೂ ಈಗ ಯೋಚಿಸಿದರೆ, ನಾನೇನಾದರೂ ಹಕ್ಕಿಯಾಗಿದ್ದರೆ ಅಂತರಿಕ್ಷ ಪಿಶಾಚಿಯಾಗಿ ಸುತ್ತುತ್ತಿದ್ದೆ. ಮೇಲೆ ಕ್ಷಿತಿಜದಲ್ಲಿ ಓಝೋನ್ ಮಳೆ, ಅಲ್ಲಲ್ಲಿ ಆಕಾಶದಲ್ಲಿ ತೂತು, ಭೂಮಿಯ ಮೇಲೆ ಗೂಡು ಕಟ್ಟಲೂ ಮರಗಳೇ ಇಲ್ಲ. ಹೋಗಲಿ ಮನೆಯ ಹುಲ್ಲಿನ ಛಾವಣಿಯಲ್ಲಿ ಆಶ್ರಯಪಡೆಯೋಣವೆಂದರೆ ಈ ಮುಂದುವರಿದ ಆಧುನಿಕತೆಯಲ್ಲಿ ತೋರ್ಪಡೆಗಾಗಿ ಕೃತಕ ಹುಲ್ಲನ್ನು ಕುಕ್ಕಿ ಕುಕ್ಕಿ ಕೊಕ್ಕು ಮುರಿಯುತ್ತಿತ್ತು. ಮನೆಯ ಹಿರಿಯರ ಫೋಟೋಗಳ ಹಿಂದೆ ಗೂಡು ಕಟ್ಟೋಣವೆಂದರೆ ಈಗ ಫೋಟೋಗಳನ್ನು ತಗಲಿ ಹಾಕಲು ಮೊಳೆ ಹೊಡೆದರೆ ಗೋಡೆಯೇ ಮುರಿದು ಬೀಳುವ ಸ್ಥಿತಿ! ಅದರ ಬದಲು ಇದ್ದವರು ಇನ್ನಿಲ್ಲದವರ ಕ್ಯಾಸೆಟ್‌ಗಳನ್ನು ಟಿ.ವಿ.ಯಲ್ಲಿ ಏನೂ ಕಾರ್ಯಕ್ರಮವಿಲ್ಲದಾಗ ಹಾಕಿ ಇಲ್ಲದವರನ್ನು ನೋಡುವ ಹವ್ಯಾಸ!

ಎಲ್ಲಿ ಗೂಡು ಕಟ್ಟೋಣ/ ಹೇಗೆ ಬದುಕೋಣ? ಗಗನದಲ್ಲಿ ದೂಷಿತ ವಾಯು; ಭೂಮಿಯ ಮೇಲೆ ಜಾಗವಿಲ್ಲ; ಗವಾಕ್ಷಿಗಳಿಲ್ಲ ಚಿಕ್ಕ ಚಿಕ್ಕ ಫ್ಲ್ಯಾಟ್‌ಗಳಲ್ಲಿ ಅಪ್ಪಿ ತಪ್ಪಿ ಹಾರಿ ಬಂದರೆ ಫ್ಯಾನಿನ ಬ್ಲೇಡಿಗೆ ಸಿಕ್ಕಿ ರೆಕ್ಕೆ ಕತ್ತರಿಸಿಕೊಂಡು ಜಟಾಯುವಿನಂತೆ ಪ್ರಾಣ ಬಿಡಬೇಕು. ತಿನ್ನಲು ಹಣ್ಣು, ಬೀಜ ಕಾಳಿಲ್ಲ ಎಲ್ಲಾ ದಿಢೀರ್ ಅಡಿಗೆಯ ಮೆತ್ತನೆ ಮೃದುವಾದ ಬೇಗ ಅರಗುವ ಆಹಾರಗಳು. ಹಕ್ಕಿಯ ಜಠರಕ್ಕೆ ಜೀರ್ಣಕೋಶಕ್ಕೆ ಅನುಕೂಲವಾದ ಆಹಾರವೇ ಇಲ್ಲ. ಉಪವಾಸದಿಂದ ಅಂತರ ಪಿಶಾಚಿಯಾಗಿ ನೆಲೆ ಇಲ್ಲ ಹಕ್ಕಿಯಾಗಿ ಬಿಡುತ್ತಿದ್ದೆನಲ್ಲಾ ಎಂದು ಈಗ ನಾನು ದಿನನಿತ್ಯ ಪರಮಾತ್ಮನಿಗೆ ಧನ್ಯವಾದ ಹೇಳುತ್ತಾ "ನೀನು ನನ್ನನ್ನು ಹಕ್ಕಿಯಾಗದಂತೆ ಅನುಗ್ರಹಿಸಿದ್ದು ಒಳ್ಳೆಯದಾಯಿತಪ್ಪಾ. ಸದ್ಯ ನಾನು ಮಾನವಿ-ಮಾನವೀಯತೆಯನ್ನು ಮೀರಿ ಮನುಷ್ಯಳಾಗೇ ಬದುಕಿದ್ದೇನಲ್ಲಾ, ಬದುಕಿತು ಈ ಬಡಜೀವ" ಎಂದು ದಿನ ಕಳೆಯುತ್ತಿದ್ದೇನೆ.

ನಾನು ಕಂಡ ಅನೇಕ ಹಕ್ಕಿಗಳು ಈಗ ಕಾಣಸಿಗುತ್ತಿಲ್ಲ. ಆಧುನಿಕತೆ-ಪರಿಸರ-ಜನಸಂಖ್ಯೆ ಇವೆಲ್ಲಾ ಶೇಷ ಪ್ರಶ್ನೆಗಳಾಗಿವೆ. ಆ ಪರಮಾತ್ಮ ಅಂತರ್ಯಾಮಿ-ಅವನೇಗತಿ. ಅ

***ಡಾ. ಅಹಲ್ಯಾಚಿಂತಾಮಣಿ***

## ಕರ್ನಾಟಕದಲ್ಲಿ ಕೇಂದ್ರ ಸರಕಾರದ ಯೋಜನೆಗಳ ಅನುಷ್ಠಾನ ಕೈಪಿಡಿ ಬಿಡುಗಡೆ



ಭಾರತ್ ನಿರ್ಮಾಣ್ ಮತ್ತು ಫ್ಲಾಗ್‌ಶಿಫ್ ಯೋಜನೆಗಳ ಕುರಿತು ನಾಲ್ಕನೆ ಆವೃತ್ತಿಯ (2012–13) ಕೈಪಿಡಿಯನ್ನು ಕರ್ನಾಟಕದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ನವದೆಹಲಿಯ ಕರ್ನಾಟಕ ಭವನದಲ್ಲಿ ಅಕ್ಟೋಬರ್ 31ರಂದು ಬಿಡುಗಡೆಗೊಳಿಸಿದರು.
ರಾಜ್ಯದ ಸಂಸದರಾದ ಶ್ರೀ ಎ.ಹೆಚ್. ವಿಶ್ವನಾಥ್, ಶ್ರೀ ಜಿ.ಎಸ್. ಬಸವರಾಜ್ ಮತ್ತು ಶಾಸಕ ಮತ್ತು ಮಾಜಿ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್ ಹಾಗೂ ಸರಕಾರದ ವಿಶೇಷ ಸಮನ್ವಯಕಾರರಾದ ಶ್ರೀ ಬೈಕೆರೆ ನಾಗೇಶ್ ಉಪಸ್ಥಿತರಿದ್ದರು. ಈ ಕೈಪಿಡಿಯಲ್ಲಿ ಕೇಂದ್ರದ ಯೋಜನೆಗಳ ಅನುಷ್ಠಾನದ ವಿಧಿವಿಧಾನ, ಯೋಜನೆಗಳ ಪ್ರಾಮುಖ್ಯತೆ ಮತ್ತು 2012–13ರಲ್ಲಿ ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರ ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು ತಿಳಿಸಲಾಗಿದೆ. ದೇಶದಲ್ಲಿಯೇ ಪ್ರಗತಿಯ ಮುಂಚೂಣಿಯಲ್ಲಿರುವ ರಾಜ್ಯಗಳಲ್ಲಿ ಒಂದಾದ ಕರ್ನಾಟಕ ಈ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುತ್ತಿದೆ. ಈ ಕೈಪಿಡಿಯನ್ನು ಕೇಂದ್ರದ ವಿವಿಧ ಸಚಿವಾಲಯಗಳೊಂದಿಗೆ ಮತ್ತು ರಾಜ್ಯ ಸರಕಾರದ ವಿವಿಧ ಇಲಾಖೆಗಳೊಂದಿಗೆ ಸಮಾಲೋಚಿಸಿ ನವದೆಹಲಿಯಲ್ಲಿ ರಾಜ್ಯ ಸರಕಾರದ ವಿಶೇಷ ಸಮನ್ವಯಕಾರರಾದ ಶ್ರೀ ಬೈಕೆರೆ ನಾಗೇಶ್ ಅವರು ಸಿದ್ಧಪಡಿಸಿರುತ್ತಾರೆ. ಅ



ಶ್ರದ್ಧಾಂಜಲಿ

## ಹೇಮಲತಾ ಮುದ್ದಪ್ಪ

ದೆಹಲಿ ಕರ್ನಾಟಕ ಸಂಘದ ಕ್ರಿಯಾಶೀಲ ಆಜೀವ ಸದಸ್ಯೆ ಶ್ರೀಮತಿ ಹೇಮಲತಾ ಮುದ್ದಪ್ಪನವರು ಅಕ್ಟೋಬರ್ 10ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘ ಜತೆಯಾಗಿ ಅಕ್ಟೋಬರ್ 12ರಂದು ಸಂಘದಲ್ಲಿ ಏರ್ಪಡಿಸಿದ ಶ್ರದ್ಧಾಂಜಲಿ ಸಭೆಯಲ್ಲಿ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತಿತರರು ಮೃತರ ಆತ್ಮಕ್ಕೆ ಶಾಂತಿ ದೊರಕಲು ಪ್ರಾರ್ಥನೆ ಸಲ್ಲಿಸಿದರು.
ದೆಹಲಿಯಲ್ಲಿ ಹುಟ್ಟಿ ಬೆಳೆದ ಶ್ರೀಮತಿ ಹೇಮಲತಾ ಅವರು ಸುಮಾರು ಐವತ್ತು ವರ್ಷಕ್ಕೂ ಹೆಚ್ಚು ಕಾಲ ಇಲ್ಲಿ ನೆಲೆಸಿದ್ದರು. ಅವರು ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ದೆಹಲಿ ಒಕ್ಕಲಿಗ ಗೌಡ ಸಂಘಗಳಲ್ಲಿ ಸಕ್ರಿಯರಾಗಿದ್ದರು. ಇಂಡಿಯನ್ ಇಕಾನಮಿ ಸಯನ್ಸ್‌ನಲ್ಲಿದ್ದ ಅವರು ಭಾರತದ ಯೋಜನಾ ಆಯೋಗದಲ್ಲಿ ನಿರ್ದೇಶಕರಾಗಿ ನಿವೃತ್ತಿ ಹೊಂದಿದ್ದರು.
ಮೃತರು ತಮ್ಮ ಪತಿ ಕೇಂದ್ರ ಗೃಹ ಸಚಿವಾಲಯದಲ್ಲಿ ಡೆಪ್ಯುಟಿ ಸೂಪರಿಟೆಂಡೆಟ್ ಪೋಲಿಸ್ ಆಗಿದ್ದ ಶ್ರೀ ಮುದ್ದಪ್ಪ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಶ್ರದ್ಧಾಂಜಲಿ ಸಭೆಯಲ್ಲಿ ಶ್ರೀ ಐ. ರಾಮಮೋಹನ ರಾವ್, ಶ್ರೀ ಸಿ.ಎಂ. ನಾಗರಾಜ, ಶ್ರೀ ಎನ್.ಎ. ಮಾಧವ, ಶ್ರೀಮತಿ ಸರೋಜ ಮಾಧವ, ಶ್ರೀ ಪಿ.ಸಿ. ಶ್ರೀನಿವಾಸ, ಶ್ರೀ ವಿ.ಆರ್. ಗುಡ್ಡೇಗೌಡ, ಶ್ರೀ ಗಣೇಶ್ ಪಿ.ಎಂ., ಶ್ರೀ ಶ್ರೀಕಾಂತ್ (ಸಿ.ಬಿ.ಐ) ಮೊದಲಾದವರು ಭಾಗವಹಿಸಿದರು. ಅ

*ಪಿ.ಸಿ. ಶ್ರೀನಿವಾಸ್*

## ರೇಣುಕಾ ನಿಡಗುಂದಿ ಅವರ ಸಣ್ಣಕಥೆಗೆ ಮೆಚ್ಚುಗೆ



ದೆಹಲಿಯ ಕ್ರಿಯಾಶೀಲ ಬರಹಗಾರ್ತಿ ರೇಣುಕಾ ನಿಡಗುಂದಿ ಅವರು ಬರೆದ ಕಥೆ ಬೊಗಸೆಯಲ್ಲಿನ ಚಂದ್ರ ವಿಜಯವಾಣಿ ದೀಪಾವಳಿ ವಿಶೇಷಾಂಕ–2013 ರ ಕಥಾ ಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದಿದೆ. ಅ

## ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಹೊಸ ಕಾರ್ಯಕಾರಿ ಸಮಿತಿ





ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವಾರ್ಷಿಕ ಮಹಾಸಭೆಯು ದೆಹಲಿಯ ಅಶೋಕ್ ವಿಹಾರ್‌ನ ಪೋಲೀಸ್ ಕಾಲೋನಿಯಲ್ಲಿ ಅಕ್ಟೋಬರ್ 6 ರಂದು ನಡೆಯಿತು. ಈ ಸಂದರ್ಭದಲ್ಲಿ ಕಲ್ಯಾಣ ಸಮಿತಿಯ 2013–14ನೇ ಸಾಲಿಗೆ ಹೊಸ ಕಾರ್ಯಕಾರಿ ಸಮಿತಿಯಲ್ಲಿ ಅಧ್ಯಕ್ಷರಾಗಿ ಶ್ರೀ ರಾಜ ಕುಮಾರ್, ಉಪಾಧ್ಯಕ್ಷರಾಗಿ ಶ್ರೀ ಆರ್.ಟಿ. ನಾರಾಯಣ, ಕಾರ್ಯದರ್ಶಿಯಾಗಿ ಶ್ರೀ ಗಿರೀಶ್, ಖಜಾಂಚಿಯಾಗಿ ಶ್ರೀ ಮಹಾದೇವ, ಹಾಗೂ ಜಂಟಿ ಕಾರ್ಯದರ್ಶಿಯಾಗಿ ಶ್ರೀ ಎಸ್.ಡಿ. ಶ್ರೀನಿವಾಸ್ ಅವರನ್ನು ಆಯ್ಕೆ ಮಾಡಲಾಯಿತು. ಅ

## ಉದುರಲಿ ಆ ಎಲೆಗಳು

ನೆನ್ನೆಯ ಬಿರುಗಾಳಿ
ಆ ಮರವನ್ನು ಅಲ್ಲಾಡಿಸಿ ಬಿಟ್ಟಿದೆ.
ಬಿರುಗಾಳಿ ಆ ಮರವನ್ನು
ಅಲ್ಲಾಡಿಸಿಲಿಕ್ಕೇ ಬೀಸಿತ್ತು
ನೋಡುತ್ತಿರುವ ಈಗ
ಏನಾದರೂ ಆ ಬಿರುಗಾಳಿ ಬೀಸಿದರೆ
ಈ ಮರದ ಬುಡವನ್ನೇ ಕಿತ್ತೆಸಿದೀತು.

ಗುಡುಗಿದರೇ ಭಯಭೀತನಾಗುವ ನೀನು
ಆಕಾಸದ ತೆರೆಯ ಮೋಡದಂತಾಗಬೇಡ
ಈಗಿನ ಬಿರುಗಾಲಿ
ಆಕಾಶವನ್ನೇ ನಗ್ನವಾಗಿಸುವುದು
ನಿನಗೊಬ್ಬನಿಗಲ್ಲದೆ ಮತ್ತಾರಿಗೂ ತಿಳಿಯದಿರಲಿ
ಈ ತೂತುಗಳು : ಹೇಳ್ತೀನಿ ಕೇಳು
ಯೋಚಿಸದಿರು ಮರ ಬೇರಿನಿಂದ
ಅಲ್ಲಾಡುವುದನ್ನು

ಈ ಮರಗಳು ಅನೇಕ ಹಣ್ಣಿನ ಬೀಜಗಳನ್ನು
ಮುಚ್ಚಿಟ್ಟವೆ. ನಿನ್ನೆಯ ವಜ್ರಾದ್‌ಘಾತದಿಂದ
ತೊಂಟೆಗಳೆಲ್ಲಾ ಮುರಿದಿವೆ
ಧೈರ್ಯವಂತನಾಗಿ ನೋಡು
ಈ ಸಲದ ಆಘಾತ ಮರವನ್ನೇ
ಛಿದ್ರ ಛಿದ್ರಗೊಳಿಸುತ್ತೆ

ನೋಡು ಎಲೆಗಳು ಹೇಗೆ ಉದುರುತ್ತಿವೆ
ಈಗ ನೀ ಅಲ್ಲಿ ಹೋಗಬೇಡ
ದೊಡ್ಡ ದೊಡ್ಡ ಹೆಬ್ಬಾವುಗಳು
ಉದುರಿದ ಎಲೆಗಳಡಿಯಲ್ಲಿ
ಮುಚ್ಚಿಕೊಂಡಿವೆ
ಎಚ್ಚರಿಕೆ ಇವನ್ನು ಕೆದಕಬೇಡ
ಬೀಳಲಿ ಬೀಳಲಿ ಎಲೆಗಳು
ಬಿದ್ದು ರಾಶಿಯಾಗಲಿ

ಒಂದು ದಿನ ಈ ವನದಲ್ಲಿ
ಯಾರಿಂದಲೋ ಬೆಂಕಿ ಕಿಡಿ ಸಿಡಿಯುತೆ
ಯಾರಿಗೆ ಗೊತ್ತು ಅದು ನಿನ್ನ ಕೈನಿಂದಲೊ
ಅಥವಾ ನನ್ನ ಕೈನಿಂದಲೊ
ಈ ಕಾಡು ನಾಶವಾಗಬೇಕು
ಅದಕ್ಕೆ ಎಲೆಗಳು ಉದುರಲಿ ಎಂದೆ
ಇದೇ ಎಲೆಗಳು ಉದುರಿ ಈ ವನ ನಶಿಸಬೇಕು

ಅದಕ್ಕೇ ಹೇಳಿದ್ದು ಆಕಾಶದ ತೆರೆಯಲ್ಲಿ
ಮೋಡವಾಗಬೇಡ ; ಯೋಚನೆ ಬೇಡ
ಈ ಉರಿಯ ಜ್ವಾಲೆಯಿಂದ ನಭವೂ
ಧಗಧಗಿಸುತ್ತೆ
ತಡಿ ತಡಿ ಈ ಮರ – ಗಟ್ಟಿ ಮರವನ್ನು ಸುಡುತ್ತೆ
ಪುನಃ ನಾಳೆಯ ಬಿರುಗಾಳಿ ಹೊಸ ರೂಪ ತಾಳಿ
ಬರುತ್ತೆ
ಅದಕ್ಕೆ ಎಲೆಗಳು ಉದುರಲಿ ಎಂದೆ. ಅ

*ಡಾ. ಅಹಲ್ಯಾಚಿಂತಾಮಣಿ*



## ಮಂಕುತಿಮ್ಮ

ಬಾಳಿನಲ್ಲಿ ಬಂದನೊಬ್ಬ ಜೊತೆಗಾರ
ಹಗಲು ರಾತ್ರಿ ಒಡನೆಯಿದ್ದ ಗೆಳೆಗಾರ
ಮನವಗೆದ್ದ ನಿಮಿಷದಲ್ಲಿ ಮೋಜುಗಾರ
ಮರಳಿಸಿದ್ದ ಮೋಸದಲ್ಲಿ ಮೋಸಗಾರ

ಕಾಯುತ್ತಿದ್ದೆ ನಿದ್ದೆಗೆಟ್ಟಿ ದೂರ ದೂರ
ಆದೆನಿಂದು ಮೋಸದಲ್ಲಿ ಸಾಲಗಾರ
ಊಟವಿಲ್ಲ ನಿದ್ದೆಯಿಲ್ಲ ವಾರ ವಾರ
ನಂಬಿಸಿದ್ದ ನಿನ್ನೆ ಬಂದ ಜೂಜುಗಾರ

ಸ್ನೇಹಕಿಂದು ಬೆಲೆಯಿಲ್ಲ ಕೇಳು ಜಾಣ
ಮೋಸಮಾಡಿ ಗೆದ್ದೆ ಏನು ಹೇಳು ಜಾಣ
ತಿರುಕನಂತೆ ನಂಗೆ ಬಡಿದ ತಿರುಗು ಬಾಣ
ಕಣ್ಣು ತೆರೆದು ಮುಂದೆ ಸಾಗು ಎಮ್ಮೆ ಕೋಣ

ಕೇಳೋರಾರು ಕೆಟ್ಟ ಸ್ವರದ ಕೆಟ್ಟ ಹಾಡು
ಕೆಟ್ಟ ಕಾಲ ಬಂದ ಮೇಲೆ ಸುತ್ತ ಕಾಡು
ಹೊಟ್ಟೆಗಿದ್ರೆ ಬಟ್ಟೆಗಿಲ್ಲ ನನ್ನ ಪಾಡು
ತಿಳಿಯ ನೀರೆ ಮದುವೆ ಊಟ ಬಂದು ನೋಡು

ರಾತ್ರಿ ಕಂಡ ಬಾವಿಯಲ್ಲಿ ಹಗಲು ಬಿದ್ದೆನಲ್ಲ
ಕಣ್ಣು ಇದ್ದು ಕುರುಡನಾಗಿ ಬೆಳೆದೆನಲ್ಲ
ಬೆಳ್ಳಗಿರುವುದೆಲ್ಲ ಬಿಳಿಯ ಹಾಲೇ ಅಲ್ಲ
ಮಡದಿ ಮಕ್ಕಳೆಂದೂ ಮೊದಲು ತಿಳಿಯಿತಲ್ಲ

ತಿನ್ನಲಿಲ್ಲ ಉಣ್ಣಲಿಲ್ಲ ಏನೂ ತಮ್ಮ
ಹೊಡೆದೆಯಾರ ಬಡಿದೆಯಾರ ಹೇಳು ತಮ್ಮ
ಏಟು ತಿಂದು ಜೀವವಿನ್ನು ನೊಂದಿತಮ್ಮ
ಯಾರೂ ಇಲ್ಲ ನನ್ನ ಹಾಗೆ ಮಂಕುತಿಮ್ಮ ಅ

*ಎಸ್. ಆರ್. ವಿನೇಶ್*

## ಆನೆ ಮತ್ತು ದುಡ್ಡು

ಬೆಳಿಗ್ಗೆ ಸುಮಾರು ಎಂಟು ಗಂಟೆಯ
ಸಮಯದಲ್ಲಿ
ಕಚೇರಿಗೆಂದು ನಾ ಹೊರಟೆ ವಾಹನದಲ್ಲಿ
ಹಿಂಭಾಗದ ಸೀಟಿನ ಕಿಟಕಿಯ ಪಕ್ಕದಲ್ಲಿ
ಕುಳಿತಿದ್ದೇನೆ ನನ್ನ ಸ್ನೇಹಿತರ ಜೊತೆಯಲ್ಲಿ

ವಾಹನ ನಿಂತಿತು ಒಂದು ಕೊಂಪು ಬತ್ತಿಯಲ್ಲಿ
ಆನೆಯೊಂದು ಬಂದು ನಿಟಿತು ನಮ್ಮ ಪಕ್ಕದಲ್ಲಿ
ಮಾವುತನೊಬ್ಬ ಆನೆಯ ಮೇಲಿನ ಕುರ್ಚಿಯಲ್ಲಿ
ಅದ ನೋಡಿದ ನಾ ತೆಗೆದೆ ಐದು ರೂಪಾಯಿ
ಕೈಯಲ್ಲಿ

ಚಾಚಿದೆ ಕೈ ಕಿಟಕಿಯ ಹೊರಗಡೆಯಲ್ಲಿ
ದುಡ್ಡು ಕೊಟ್ಟ ಆನೆಯ ದೃಷ್ಟಿ ಬೇರೆಡೆಯಲ್ಲಿ
ಆದರೆ ಮಾವುತನ ದೃಷ್ಟಿ ಮಾತ್ರ ದುಡ್ಡಿನಲ್ಲಿ
ಸೂಕ್ಷ್ಮ ಕೊಟ್ಟ ಮಾವುತ ಆನೆಯ ಕಿವಿಯಲ್ಲಿ

ಆನೆ ಸೊಂದಿಲ ಚಾಚಿತು ನನ್ನಲ್ಲಿ
ದುಡ್ಡ ಕಸಿಯಿತು ಒಂದೇ ನಿಮಿಷದಲ್ಲಿ
ಮೇಲೆ ಕೊಟ್ಟಿತು ತನ್ನ ಮಾವುತನಲ್ಲಿ
ಮಾವುತನಿಟ್ಟ ದುಡ್ಡ ತನ್ನ ಜೇಬಿನಲ್ಲಿ

ಎಂತಹ ವಿಶೇಷವಿತ್ತು ಈ ಘಟನೆಯಲ್ಲಿ
ಆನೆ ದುಡ್ಡು ತಿನ್ನುವುದಾದರೂ ಎಲ್ಲಿ
ನರ ತಿನ್ನುವ ಹಣವ ಸಮಯ ಸಿಕ್ಕಲ್ಲಿ
ಅವ ಕೊಲ್ಲುವ ತಿನ್ನುವ ಪ್ರಾಣಿಗಳ ತನ್ನ
ಮನೆಯಲ್ಲಿ

ಪ್ರಾಣಿಗಳು ನರರ ತಿನ್ನುವುದು ಒಂದು ಸತ್ಯ
ನರ ಪ್ರಾಣಿಗಳ ತಿನ್ನುವುದೂ ದಿನನಿತ್ಯದ ಸತ್ಯ
ಪ್ರಾಣಿಗಳ ದುಡ್ಡು ತಿನ್ನುವುದು ಎಲ್ಲಿಯ ಸತ್ಯ
ಆದರೆ ನರ ಮಾತ್ರ ದುಡ್ಡು ತಿನ್ನುವುದೇ
ನಿಜವಾದ ಸತ್ಯ ಅ

*ಎಸ್. ಆರ್. ವಿನೇಶ್*



# ರಾಜಧಾನಿಯ ಕನ್ನಡಿಗರನ್ನು ನಗೆಗಡಲಲ್ಲಿ ತೇಲಿಸಿದ

## ಜನಕಪುರಿ ಕನ್ನಡ ಕೂಟದ ನಗೆ ಹಬ್ಬ ಕಾರ್ಯಕ್ರಮ




ದೆಹಲಿಯಲ್ಲಿರುವ ಹಿರಿಯ ಕನ್ನಡಪರ ಸಂಘಟನೆಗಳಲ್ಲಿ ಒಂದಾದ ಜನಕಪುರಿ ಕನ್ನಡ ಕೂಟವು ಅಕ್ಟೋಬರ್ 26ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಅಪರೂಪದ ನಗೆಹಬ್ಬ ಕಾರ್ಯಕ್ರಮವನ್ನು ನಡೆಸಿತು. ಹಾಸ್ಯ ಕಲಾವಿದರಾಗಿ ಕರ್ನಾಟಕ ಹಾಗೂ ದೇಶ ವಿದೇಶಗಳಲ್ಲೂ ಜನಪ್ರಿಯರಾಗಿರುವ ರಿಚರ್ಡ ಲೂಯಿಸ್, ಕಿರ್ಲೋಸ್ಕರ್ ಸತ್ಯ, ಮೈಸೂರು ಆನಂದ, ಭಜಂತ್ರಿ ಅವರು ಕನ್ನಡದ ಸತ್ವವನ್ನು ವಿವಿಧ ಶೈಲಿಗಳಲ್ಲಿ ಮತ್ತು ಭಂಗಿಗಳಲ್ಲಿ ಪ್ರದರ್ಶಿಸಿದರು.

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕನ್ನಡ ಕಲೆ, ಸಂಸ್ಕೃತಿ, ಸಾಹಿತ್ಯ, ಸಂಗೀತಗಳನ್ನು ಉಳಿಸಿ ಬೆಳಿಸಿಕೊಳ್ಳುವುದರ ಜತೆಗೆ ನಮ್ಮ ಮುಂದಿನ ಪೀಳಿಗೆಗೆ ಕನ್ನಡದ ಕಂಪನ್ನು ಪರಿಚಯಿಸುವ ಗುರುತರವಾದ ಜವಾಬ್ದಾರಿಯನ್ನು ವಹಿಸುವ ಹೊಣೆಗಾರಿಕೆಯಿದೆಯೆಂದು ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಅವರು ಈ ಸಂದರ್ಭದಲ್ಲಿ ಹೇಳಿದರು.

ಕಾರ್ಯಕ್ರಮದಲ್ಲಿ ಕಿಕ್ಕಿರಿದು ನೆರೆದಿದ್ದ ಕನ್ನಡ ಪ್ರೇಮಿಗಳಲ್ಲಿ ಹುದುಗಿದ್ದ ನಗೆಯ ಅಂತರ್ಜಲವನ್ನು ಹೊರಹೊಮ್ಮಿಸಿ ಇಡೀ ಸಭಾಂಗಣ ಹಾಸ್ಯರಸಧಾರೆಯಲ್ಲಿ ಮೀಯುವಂತಾಯಿತು. ಆರಂಭದಲ್ಲಿ ಜನಕಪುರಿ ಕನ್ನಡ ಮಹಿಳಾಮಂಡಳಿಯ ಅಧ್ಯಕ್ಷೆ ಶ್ರೀಮತಿ ಸವಿತಾ ಇನಾಮದಾರ್, ಕಾರ್ಯದರ್ಶಿ ಶ್ರೀಮತಿ





ಮೋಹಿನಿ ರೈ ಅವರ ಜತೆಗೆ ಶ್ರೀಮತಿ ಜಯಶ್ರೀ ಬಸವರಾಜು, ಶ್ರೀಮತಿ ರಾಜೇಶ್ವರಿ ಪ್ರಕಾಶ್, ಶ್ರೀಮತಿ ಸವಿತಾ ಭಂಡಾರ್ಕರ್, ಶ್ರೀಮತಿ ಪ್ರೇರಣಾ ವೆಂಕಟೇಶ್, ಶ್ರೀಮತಿ ಮಮತಾ ಸದಾನಂದಬಾಬು, ಡಾ. ಸಾಯಿಪ್ರಶಾಂತಿ ಶೆಟ್ಟಿ ಅವರು ವಿಘ್ನ ನಾಯಕನ ಸ್ತುತಿ ಹಾಗೂ ನಾಡಗೀತೆಯನ್ನು ಹಾಡಿದರು.

ಗೌರವ ಕಾರ್ಯದರ್ಶಿ ಶ್ರೀ ಎನ್. ಪ್ರಕಾಶ್ ಅವರು ವಂದನಾರ್ಪಣೆ ಮಾಡಿದರು. ಖಜಾಂಚಿ ಶ್ರೀ ಎನ್. ಪಿ. ಚಂದ್ರಶೇಖರ್ ಕಾರ್ಯಕ್ರಮ ನಿರೂಪಿಸಿದರು. ಅ

***ಎನ್. ಪ್ರಕಾಶ್***




## ಓದುಗರ ಪತ್ರ

ಹಲವಾರು ವೈವಿಧ್ಯ ರೂಪಗಳಲ್ಲಿ, ಭಾವುಕ ಕನ್ನಡಿಗರ, ಅದರಲ್ಲೂ ಅತಿಶಯವಾಗಿ ದೆಹಲಿ ಕನ್ನಡಿಗರ ಮನೋಭಾವನೆಗಳು ಜವ್ವನೆ ಅಭಿಮತಳ ಅಂಗಾಂಗಳಲ್ಲಿ ಮೂಡಿ ತುಂಬಿ ತುಳುಕುತ್ತಿವೆ. ದಿನೇ ದಿನೇ ಸುಂದರ ಕವಚ ತೊಟ್ಟು ಅವಳು ಕನ್ನಡಮ್ಮನ ತೋಟದಲ್ಲಿ ಆಯ್ದು ತಂದ ಅರಳಿದ ಸುಂದರ ಪುಷ್ಪಗಳನ್ನು ಮಡಿಲಲ್ಲಿ ತುಂಬಿಕೊಂಡು ಕನ್ನಡಿಗರೆಲ್ಲರಿಗೂ ಹಂಚಿ ಮುದಗೊಳಿಸುತ್ತಾಳೆ!

ದೆಹಲಿ ಕನ್ನಡಿಗರ ಮುದ್ದು ಮಗಳ ಮಡಿಲಲ್ಲಿ ನಾನಾ ದಿಶೆಗಳಿಂದ ಬರುತ್ತಿರುವ ಪ್ರಶಂಸನೀಯ ನುಡಿಗಳು, ಗಹನವಾದ ಚಾರಿತ್ರಿಕ, ಸಾಮಾಜಿಕ, ಭೌಗೋಳಿಕ, ತಾಂತ್ರಿಕ, ವೈಜ್ಞಾನಿಕ ಭಾಷಾ ವಿಜ್ಞಾನ, ಲಘು ಹಾಸ್ಯ, ಪರಿಸರ ಕಳಕಳಿ, ಸಾಂಸ್ಕೃತಿಕ ಸಮುದಾಯ, ಛಾಯಾಚಿತ್ರ, ನೃತ್ಯ, ನಾಟಕ ಛಾಯಚಿತ್ರ-ಚಿತ್ರಕಲೆ ಏನೆಲ್ಲಾ ವಿಷಯಗಳಿಂದ ತುಂಬಿ ತುಳುಕಿ ಕನ್ನಡದ ಕಂಪು, ಇಂಪು-ಪೆಂಪು ಎಲ್ಲೆಡೆಯೂ ಉಕ್ಕಿ ಹರಿಯುತ್ತಿದೆ. ಅಮ್ಮಾ ಮಗಳೇ, ನಿನ್ನ ಜ್ಞಾನ ಭಂಡಾರ ಎಲ್ಲರಿಗೂ ಅಪ್ಯಾಯಮಾನವಾಗಿದೆ. ಇಂತೆಯೇ ಇರಲಿ, ಹೀಗೆಯೇ ಮುಂದುವರಿಯಲಿ ಪ್ರಗತಿ ದಿಶೆಯಲ್ಲಿ! ಚಾರಿತ್ರಿಕಾರ್ಹವಾಗಿರಲಿ ಎಂದು "ತ್ರ್ಯಕ್ಷರಿ ಶೃಂಗೇರಿ ಶಾರದೆ"ಯನ್ನು ಅನವರತ ಪ್ರಾರ್ಥಿಸುತ್ತಾ ನಿನ್ನನ್ನೂ ನಿನ್ನ ಪೋಷಕರನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ನಿನ್ನ ಭಂಡಾರದಿಂದ ಕಡೆದು ತೆಗೆದ ಚಿಂತನ-ಮಂಥನದ ಬೆಣ್ಣೆಯನ್ನು ಸವಿದು ನನ್ನ ಬುದ್ಧಿಯೂ ವಿಕಾಸಗೊಳ್ಳಲಿ ಎಂದು ಬಯಸುತ್ತಾ ಹಾರೈಸುವೆ. ಅ

***ಡಾ. ಅಹಲ್ಯಾ ಚಿಂತಾಮಣಿ, ನವದೆಹಲಿ***

ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ ಹೊಸ ವಿನ್ಯಾಸಗಳನ್ನೊಳಗೊಂಡು ಅತ್ಯುತ್ತಮವಾಗಿ ಹೊರಬರುತ್ತಿರುವುದಕ್ಕೆ ಈಗಿನ ಸಂಪಾದಕ ಮಂಡಳಿಗೆ ಶುಭ ಹಾರೈಸುವೆನು. ಅಪ್ಪನಿಗೊಂದು ಪತ್ರ ಇಂಗ್ಲಿಷ್‌ಗೆ ತರ್ಜುಮೆಗೊಳಿಸಿ ಈಗಿನ ಮಕ್ಕಳು ಓದುವಂತೆ ಮಾಡಿದರೆ ಉತ್ತಮ. ಭಾವನೆಯ ಬಳ್ಳಿ ಅಂಕಣ ಸುಂದರವಾಗಿ ಮನಮುಟ್ಟುವಂತೆ ಇದೆ. ತಿಂಗಳ ಕಾರ್ಯಕ್ರಮಗಳ ವಿವರವೂ ದೆಹಲಿ ಕನ್ನಡಿಗರಿಗೆ ತಮ್ಮ ಸಮಯಸೂಚಿಯನ್ನು ತಯಾರಿಸಿ ಹೆಚ್ಚು ಕಾರ್ಯಕ್ರಮಗಳನ್ನು ವೀಕ್ಷಿಸುವುದಕ್ಕೆ ಸಹಕಾರಿಯಾಗುವುದೆಂದು ನನ್ನ ಅನಿಸಿಕೆ. ಇದೇ ರೀತಿ ಮುಂದೆಯೂ ಈ ಮುಖಪತ್ರಿಕೆ ಚೆನ್ನಾಗಿ ಮೂಡಿ ಬರಲೆಂದು ಹಾರೈಸುವೆನು. ಅ

***ಕೆ.ಎಸ್.ಜಿ. ಶೆಟ್ಟಿ, ನವದೆಹಲಿ***

ಪ್ರತಿ ತಿಂಗಳೂ ಬರುವ 'ಅಭಿಮತ'ಕ್ಕೆ ಕಾಯುತ್ತಿರುತ್ತೇನೆ. ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ಎಲ್ಲಾ ರೀತಿಯ ಸಾಂಸ್ಕೃತಿಕ ಹಾಗೂ ಆಟೋಟ ಕಾರ್ಯಕ್ರಮಗಳು ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘ ಚೆನ್ನಾಗಿ ನಡೆಸುತ್ತಿರುವ ವಿಷಯ ತುಂಬಾ ಸಂತೋಷ. ಅಭಿಮತದ ಮೂಲಕ ದೆಹಲಿ ಕರ್ನಾಟಕ ಸಂಘದ ಎಲ್ಲಾ ವಿಷಯಗಳೂ ನಮ್ಮ ಹಳ್ಳಿಯವರೆಗೂ ತಲುಪುತ್ತಿರುವುದು ಹೆಮ್ಮೆಯ ವಿಷಯ. ಮುಖ್ಯವಾಗಿ ಸಂಘದ ಹೊಸ ಕಾರ್ಯಕಾರಿ ಸಮಿತಿಗೆ ಸುಸ್ವಾಗತ. ಅ

***ವರ್ಣಾ ಶಶಿಕುಮಾರ್, ಮುಂಡಳ್ಳಿ***

'ಇಗೋ ಕನ್ನಡ' ಎಂಬ ಬೃಹತ್ ಕನ್ನಡ ಅರ್ಥ ಕೋಶವೊಂದರ ಜನಕನೆಂಬ ಖ್ಯಾತಿಗೆ ಭಾಜನರಾದ ಶತಾಯುಷಿ ಸಾಹಿತಿ ವೆಂಕಟಸುಬ್ಬಯ್ಯರನ್ನು ದೆಹಲಿ ಕನ್ನಡಿಗರ ವತಿಯಿಂದ ಸನ್ಮಾನಿಸಲ್ಪಟ್ಟು ಸಚಿತ್ರ ವರದಿಯ ಆಖಾಡವಾಗಿ ತೋರಿ ಬಂದ ಅಭಿಮತದ ಸಪ್ಟೆಂಬರ್ ಸಂಚಿಕೆ ಇನ್ನಷ್ಟೂ ಸಾಂಸ್ಕೃತಿಕ ಕಾರ್ಯಕ್ರಮಗಳ ಆರಂಭವನ್ನು ಮೂರರಿಂದ ಆರಕ್ಕೇರಿಸಿಕೊಂಡಿದೆ.

ಅಲ್ಲಲ್ಲಿ ಜರಗಿದ ಕಾರ್ಯಕ್ರಮದ ಮಾಹಿತಿ ಮುಂತಾದ ತುಂತುರು ಸುದ್ದಿ ಸಾರಗಳಿಂದ ಅಭಿಮತವು ಸರ್ವಮತ ಸಮನ್ವಯದಂತೆ ಕಾಣಿಸಿತು. ಅಭಿನಂದನೆಗಳು. ಅ

***ಕೀರಿಕ್ಕಾಡು ವನಮಾಲ ಕೇಶವ ಭಟ್ಟ, ಕಾಸರಗೋಡು***


# Saujanya Printing Press

A HOUSE OF QUALITY PRINTING

C-95, Okhla Industrial Area, Phase-I
New Delhi-110020
Tel: 40520770
Mobile : 9811104398, 9811604398
E-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ಮಣ್ಣು ಮತ್ತು ನೆನಪು

ನಾವೆಲ್ಲರೂ ದೂರ ಬಂದಿದ್ದೇವೆ.ನಮ್ಮದು ಎನ್ನುವ ಹಲವು ಬಗೆಗಳನ್ನು ಬಿಟ್ಟು ಬಂದಿದ್ದೇವೆ. ನಮ್ಮ ಅತ್ಯಂತ ಪ್ರೀತಿಯ ಹಸು, ನಾಯಿ, ಬೆಕ್ಕು, ಗಿಳಿ, ಮೀನು ಅಲ್ಲಿಯೇ ಉಳಿದಿವೆ.

ನಾವು ಆಡುತ್ತಿದ್ದ ಆಟದ ಮೈದಾನ, ಓಡುತ್ತಿದ್ದ ದಾರಿ, ಮೀಯುತ್ತಿದ್ದ ಕೆರೆ, ನದಿ, ಕಡಲು.ಎತ್ತರ ಬೆಳೆದು ನಿಂತ ಮರ, ಅದರ ಹಣ್ಣುಗಳು, ಅಲ್ಲಿನ ಸಣ್ಣ ದೊಡ್ಡ ಬೆಟ್ಟಗಳು.

ನೋಡುತ್ತಿದ್ದ ಸಣ್ಣಾಟ, ಕೋಲಾಟ, ಡೊಳ್ಳಿನ ಕುಣಿತ, ಯಕ್ಷಗಾನ, ಕಂಬಳ, ಊರಿನ ಜಾತ್ರೆ, ಮಸೀದಿಯ ಉರೂಸು, ಚರ್ಚಿನ ಹಬ್ಬ, ಮಂದಿರದ ಭಜನೆ.

ತೋಟದ ಬಾಳೆ, ಎಳನೀರು, ಹೊಲದ ಕಬ್ಬು, ಕಡಲೆ, ಸೌತೆ, ಸೀಬೆ, ಮಾವು, ಹಲಸು, ಚಿಕ್ಕು.



ಮನೆಯ ಮಂದಿ, ಬಾಲ್ಯದ ಒಡನಾಡಿಗಳು, ಕಾರಣವಿಲ್ಲದೇ ಅತ್ತಾಗ ಕಣ್ಣೊರಸಿದ ಆಚೆ ಮನೆಯ ಅಮ್ಮಂದಿರು.

ಅವೆಲ್ಲವನ್ನೂ ನಮ್ಮ ಎದೆಯ ಚೀಲದೊಳಗೆ ಹಾಕಿಕೊಂಡು ಬಂದ ನಾವು ನೆನಪಾದಾಗ ಕಣ್ಣಂಚಿನಲ್ಲಿ ತಂದು ಬಿಡುತ್ತೇವೆ.

ನಾವು ಹೊರಡುವಾಗ ಎಲ್ಲಿ ಎಷ್ಟು ಏನು ಯಾರು ಯಾಕೆ ಹೇಗೆ ಎಂದು ಗೊತ್ತಿಲ್ಲದೇ ಹೊರಟಿದ್ದೆವು. ಇಲ್ಲಿ ಬಂದಾಗ ನಮ್ಮಂತೆ ಬಂದವರನ್ನು ಕಂಡು ಮುಗುಳ್ನಕ್ಕು ನೋಡಿದ್ದೇವೆ. ಕೈ ಹಿಡಿದು ಮಾತಾಡಿದ್ದೇವೆ. ಮತ್ತೆ ಅಲ್ಲಿಯ ನೆನಪುಗಳನ್ನು ಹಸಿರಾಗಿಸಿದ್ದೇವೆ. ಜತೆಗೆ ಇಲ್ಲಿಯೇ ಇದ್ದವರನ್ನು ಕೂಡ ನಮ್ಮವರನ್ನಾಗಿಸಿ, ನಾವು ಅವರಾಗಿ ಎಲ್ಲಾ ಒಂದಾಗಿದ್ದೇವೆ.

ಬೀದರಿನ ಭಾಲ್ಕಿಯಿಂದ, ಮೈಸೂರಿನ ಗುಂಡ್ಲುಪೇಟೆಯಿಂದ, ಕರಾವಳಿಯ ಮಲ್ಪೆಯಿಂದ, ಕೋಲಾರದ ಚಿಂತಾಮಣಿಯಿಂದ, ಬೆಳಗಾವಿಯ ಹುಕ್ಕೇರಿಯಿಂದ, ಬೆಂಗಳೂರಿನ ಆನೇಕಲ್‌ನಿಂದ ಹೀಗೆ ಮತ್ತೆ ಎಲ್ಲೆಲ್ಲಿಂದಲೋ ಬಂದ ನಾವೆಲ್ಲರೂ ಇಲ್ಲಿ ಎಲ್ಲರಿಗೂ ಕರ್ನಾಟಕದವರಾಗಿದ್ದೇವೆ. ಬದುಕು, ಕನಸು, ಭಾಷೆ, ವೇಷ, ಊಟ, ಉಪಚಾರಗಳ ಭಿನ್ನತೆಯಲ್ಲಿ ಒಂದನ್ನು ಕಾಣುತ್ತಾ ಇದ್ದೇವೆ.

ನವಂಬರ್ ತಿಂಗಳ ಕರ್ನಾಟಕ ರಾಜ್ಯೋತ್ಸವ ಹೊರನಾಡಿನಲ್ಲಿರುವ ನಮಗೆಲ್ಲರಿಗೂ ಹೆಮ್ಮೆಯ, ಉಲ್ಲಾಸದ, ಸಂಭ್ರಮದ ದಿನಗಳು.

ನಮ್ಮವರ ಜತೆಗೆ ನಮ್ಮ ನಾಡಿನ ಕಲಾವಿದರ, ಕಲಾಕೃತಿಗಳ, ಸಾಧಕರ, ಪ್ರತಿಭಾವಂತರ ಜತೆ ಸಂತಸದ ಕ್ಷಣಗಳನ್ನು ಕಳೆಯಲು ದೆಹಲಿ ಕರ್ನಾಟಕ ಸಂಘವು ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿದೆ. ದೆಹಲಿಯಲ್ಲಿ ನಮ್ಮ ಮಣ್ಣಿನ ವಾಸನೆಯನ್ನು ಹಿಡಿಯಲು ಜತೆಯಾಗುವ.

ಅಲ್ಲಿ ಬಿಟ್ಟು ಬಂದುದನ್ನು ಇಲ್ಲಿ ಹುಡುಕೋಣ. ಅ

***ಬಾಲಕೃಷ್ಣ ನಾಯ್ಕ್ ಡಿ.***


Delhi Karnataka Sangha Abhimatha Monthly,
November - 2013, Price Rs.1/-  RNI Regn. No. 53405/91, DL-SW-1/4016/13-15
Printout Date : November 8th / 9th, Postal Date :10th / 11th, Total Pages-20


PURAVANKARA




Maravilloso homes! Sounds perfect for Purva Skydale. In fact, these homes speak of beauty in every aspect. Located off Sarjapur Main Road, Purva Skydale is just 10 minutes away from ORR IT hub. Experience an enchanting world of shimmering lakes and exquisite gardens, romantic Juliet balconies and a floating clubhouse. Fitted with all modern conveniences, these homes transcend the usual expectations of urban living and bring you magic in real life.

PURVA SKYDALE
Maravilloso Homes,
off Sarjapur Main Road. 2 & 3 BHK Apts.



Call: +91 124 44 55 555 | www.puravankara.com | sales@puravankara.com

**Puravankara Projects Limited.** 130/1, Ulsoor Road, Bangalore - 560042. Sales office on Ulsoor Road open from 9 am to 6 pm on all days.
**Site:** Purva Skydale, Next to Purva Skywood, off Harlur Road, Bangalore – 560 102.
CREDAI
SANKALP

Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770